ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 9 ಸಂಚಿಕೆ 46 ನವಂಬರ್ 15, 1987 ಬೆಲೆ 1 ರೂ.

ಒಳಗಿನ ಪುಟಗಳಲ್ಲಿ

ರಾಷ್ಟ್ರವ್ಯಾಪಿ ಜಾಥಾ ಹಾಗೂ ಪಾರ್ಲಿಮೆಂಟ್ ಚಲೋ ಯಶಸ್ವಿಗೊಳಿಸಿ

ಅಕ್ಟೋಬರ್ 11ರಂದು ಸೇರಿದ 24 ಸಾಮುದಾಯಿಕ ಮತ್ತು ಸಾಮೂಹಿಕ ಸಂಘಟನೆಗಳ ಸಮ್ಮೇಳನವು ದೇಶವನ್ನು ಬಾಧಿಸುತ್ತಿರುವ ಜ್ವಲಂತ ಸಮಸ್ಯೆಗಳಿಗಿದಿರಾಗಿ ಕಾರ್ಮಿಕ ವರ್ಗ, ರೈತಾಪಿ ಜನತೆ, ಕೃಷಿ ಕಾರ್ಮಿಕರು, ವಿದ್ಯಾರ್ಥಿಗಳು, ಯುವ ಜನತೆ ಮತ್ತು ಮಹಿಳೆಯರನ್ನೂ ಸಂಘಟಿಸಿ ಹೋರಾಡಲು ನಿರ್ಧರಿಸಿದೆ. ವಿಶಾಲ ತಳಹದಿಯ ಮಿಲಿಯಾಂತರ ಜನರನ್ನೊಳಗೊಂಡ ಈ ದೇಶ ವ್ಯಾಪಿ, ಪ್ರಚಾರ ಮತ್ತು ಪ್ರಕ್ಷೋಭೆಗಳ ಅಂಗವಾಗಿ ಡಿಸಂಬರ್ 9ರಂದು 'ಪಾರ್ಲಿಮೆಂಟ್ ಚಲೋ' ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಬರ ಮತ್ತು ಪ್ರವಾಹ ಪೀಡಿತಜನರಿಗೆ ಪರಿಹಾರ ಬೆಲೆಯೇರಿಕೆ ನಿಯಂತ್ರಣ, ಸಾರ್ವಜನಿಕ ವಿತರಣಾ ವ್ಯವಸ್ಥೆಯೊಂದರ ರಚನೆ, ರೈತರ ಉತ್ಪನ್ನಗಳಿಗೆ ಲಾಭದಾಯಕ ಬೆಲೆ, ಎಲ್ಲರಿಗೂ ಶಿಕ್ಷಣ ಮತ್ತು ಉದ್ಯೋಗ, ಕೈಗಾರಿಕೆಗಳ ಮುಚ್ಚುವಿಕೆಗೆ ತಡೆ, ಕಾರ್ಮಿಕ ಹಕ್ಕುಗಳ ರಕ್ಷಣೆ, ಮಹಿಳೆಯರಿಗೆ ಸಮಾನ ಹಕ್ಕುಗಳು, ಮಹಿಳೆಯರನ್ನೂ ಒಳಗೊಂಡಂತೆ ದುರ್ಬಲ ವರ್ಗಗಳ ಮೇಲಾಗುತ್ತಿರುವ ಆಕ್ರಮಣಗಳನ್ನು ಕೊನೆಗೊಳಿಸುವುದು ಇತ್ಯಾದಿಗಳೇ ಪ್ರಧಾನ ಬೇಡಿಕೆಗಳಾಗಿರುವ ಈ ಚಳುವಳಿಯಲ್ಲಿ ಕೃಷಿ ಕಾರ್ಮಿಕರಿಗಾಗಿ ಕೇಂದ್ರೀಯ ಶಾಸನ, ಅಸಂಘಟಿತ ಕಾರ್ಮಿಕರಿಗೆ ಕನಿಷ್ಠ ವೇತನ ನಿಗದಿ, ಪರಿಣಾಮಕಾರಿ ಭೂಸುಧಾರಣೆಯ ಅನುಷ್ಠಾನ, ಕೇಂದ್ರ-ರಾಜ್ಯ ಸಂಬಂಧಗಳ ಪುನಾರಚನೆ ಚುನಾವಣಾ ಪದ್ಧತಿಯಲ್ಲಿ ಸುಧಾರಣೆ- ಮುಂತಾದ ಬೇಡಿಕೆಗಳೂ ಮಹತ್ವದ ಪಾತ್ರವಹಿಸುತ್ತವೆ. ಚಳುವಳಿಯು ದೇಶದ ಐಕ್ಯತೆಯ ಸಂರಕ್ಷಣೆ, ಕೋಮುವಾದ ಮತ್ತು ಪ್ರತ್ಯೇಕತಾವಾದಿ ಶಕ್ತಿಗಳ ದಮನ ಹಾಗೂ ಉನ್ನತ ವಲಯಗಳಲ್ಲಿ ತಾಂಡವವಾಡುತ್ತಿರುವ ಭ್ರಷ್ಟಾಚಾರವನ್ನು ಕೊನೆಗೊಳಿಸುವ ಕುರಿತಾದ ಬೇಡಿಕೆಗಳನ್ನೂ ಬಹುಮುಖ್ಯವಾಗಿಪರಿಗಣಿಸಿದೆ.

ಈ ಎಲ್ಲ ಬೇಡಿಕೆಗಳಿಗಾಗಿ ನಡೆಯುವ ಪ್ರಚಾರ ಮತ್ತು ಚಳುವಳಿಯು ರಾಜೀವಗಾಂಧಿ ಸರ್ಕಾರ ರಾಜೀನಾಮೆ ನೀಡಿ ಜನತೆಯ ಆದೇಶವನ್ನು ಮತ್ತೊಮ್ಮೆ ಪಡೆಯಬೇಕೆಂಬ ಬೇಡಿಕೆಯೊಂದಿಗೆ ಸಂಬಂಧಿಸಿಕೊಂಡಿರಬೇಕೆಂದೂ ಅಕ್ಟೋಬರ್ 11ರ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ದೇಶದಲ್ಲಿ ಹೊಸ ಜಾಗೃತಿಯೊಂದನ್ನು ಉಂಟು ಮಾಡಲು ಉದ್ದೇಶಿತವಾಗಿರುವ ಈ ಚಳುವಳಿಯನ್ನು ಯಶಸ್ವಿಗೊಳಿಸುವುದು ಎರಡು ದೃಷ್ಟಿಯಿಂದ ಅತ್ಯಂತ ಮಹತ್ವಪೂರ್ಣ. ಬಲ ಪಂಥೀಯ ಪಕ್ಷಗಳನ್ನು ಸೋಲಿಸಿ ಅವುಗಳನ್ನು ಜನತೆಯಿಂದ ಪ್ರತ್ಯೇಕಗೊಳಿಸಲು ಎಡಪಂಥೀಯ ಶಕ್ತಿಗಳಿಗೆ ಸಾಧ್ಯವೇ ಮತ್ತು ರಾಜೀವ ಗಾಂಧಿ ಸರ್ಕಾರದ ರಾಜೀನಾಮೆ ಹಾಗೂ ಮಧ್ಯಂತರ ಚುನಾವಣೆ ಈ ಬೇಡಿಕೆಯ ಆಧಾರದಲ್ಲಿ ಜನ ಸಾಮಾನ್ಯರ ಹಿತಾಸಕ್ತಿಯ ರಕ್ಷಣೆಗಾಗಿ ಎಡ ಮತ್ತು ಜಾತ್ಯಾತೀತ ಶಕ್ತಿಗಳ ಐಕ್ಯತೆಯನ್ನು ಸಾಧಿಸುವಲ್ಲಿ ಎಡ ಪಕ್ಷಗಳು ಜಯಶಾಲಿಗಳಾಗುವವುದೇ ಎಂಬ ಪ್ರಶ್ನೆಗಳು ಈ ಚಳುವಳಿಯ ಗೆಲುವಿನ ಮೇಲೆ ಆ[illegible]ಶಿತವಾಗಿದೆ.

ಚಳುವಳಿಯ ಯಶಸ್ಸು ದೇಶದ ರಾಜಕೀಯ ಶಕ್ತಿಗಳ ಕ್ರೋಢೀಕರಣದಲ್ಲಿ ಮಹತ್ವದ ಬದಲಾವಣೆಯನ್ನು ತರುವುದಲ್ಲದೆ, ಎಡಪಕ್ಷಗಳು ರಾಷ್ಟ್ರದ ರಾಜಕೀಯ ಆಗು ಹೋಗುಗಳಲ್ಲಿ ಪ್ರಮುಖ ಪಾತ್ರವಹಿಸುವಂತಹ ಸ್ಥಿತಿಯನ್ನು ನಿರ್ಮಾಣ ಮಾಡುವುದು ಖಚಿತ. ಹಾಗಾಗಿ ಎಲ್ಲಾಸಾಮೂಹಿಕ, ಸಾಮುದಾಯಿಕ ಸಂಘಟನೆಗಳನ್ನು ತಮ್ಮ ಸಮಸ್ತ ಶಕ್ತಿಯನ್ನು ಪಣವಾಗಿವಾಟ್ಟು ಈ ಚಳುವಳಿಯನ್ನು ಪ್ರಚಂಡ ರೀತಿಯಲ್ಲಿ ಯಶಸ್ಸುಗೊಳಿಸಲೇಬೇಕು

ಕಾ|| ಸುರ್ಜಿತ್

ಕಳೆದಆಗಸ್ಟ್ ತಿಂಗಳಲ್ಲಿ ಸಭೆ ಸೇರಿದ್ದ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಕೇಂದ್ರ ಸಮಿತಿ ರಾಜೀವ್ ಸರ್ಕಾರದ ವಿನಾಶಕಾರಿ ಧೋರಣೆಗಳ ಫಲವಾಗಿ ಜನತೆಯಲ್ಲಿ ಅತೃಪ್ತಿ ಭುಗಿಲೇಳುತ್ತಿರುವುದನ್ನು ಗಮನಿಸಿದೆ. ಗ್ರಾಮಾಂತರ ಪ್ರದೇಶದಲ್ಲಂತೂ ಜನತೆಯ ಆಕ್ರೋಶ ವಿಸ್ಫೋಟಕ ಪರಿಸ್ಥಿತಿಯನ್ನು ನಿರ್ಮಿಸಿರುವುದನ್ನು ಕಾಣಬಹುದು. ದೇಶದ ಹಲವಾರು ಕಡೆ

(8ನೇ ಪುಟ ನೋಡಿ)

ಕರ್ನಾಟಕದ ನಾಲ್ಕು ಉಪಜಾಥಾಗಳು ಹೊರಡುವ ನಕ್ಷೆ



ಸೂಚನೆ

ಕರ್ನಾಟಕದ 4 ಉಪ ಜಾಥ, ತಿರುವನಂತಪುರದ ಅಖಿಲ ಭಾರತ ಜಾಥ ನವಂಬರ್ 20 ರಂದು ಬೆಂಗಳೂರಿಗೆ ಬರುತ್ತಿರುವ ಹಿನ್ನಲೆಯಲ್ಲಿ ನವಂಬರ್ 15 ರಂದು ಪ್ರಕಟಗೊಳ ಬೇಕಿದ್ದ ಸೋವಿಯೆತ್ ಕ್ರಾಂತಿಯ ವಿಶೇಷ ಸಂಚಿಕೆ ನವಂಬರ್ 20 ರಂದು ಬಿಡುಗಡೆ ಮಾಡಲಾಗುತ್ತಿದೆ.

ದೇಶ – ವಿರೋಧಿ ರಕ್ಷಣಾ ವ್ಯವಹಾರಗಳು ರದ್ದಾಗಬೇಕು

ರಾಜೀವ್‌ಗಾಂಧಿಯವರ ಅಮೆರಿಕನ್ ಭೇಟಿಯ ಫಲವಾಗಿ ಆ ದೇಶಕ್ಕೆ ನಮ್ಮ ಹಿತಾಸಕ್ತಿಗಳಿಗೆ ವಿರುದ್ಧವಾದ ರಿಯಾಯಿತಿಗಳನ್ನು ನೀಡಬಹುದು ಎಂಬ ಶಂಕೆಯಿತ್ತು. ತಮ್ಮ ಹೊಸ ಆರ್ಥಿಕ ನೀತಿಯ ಪರಿಣಾಮವಾಗಿ ರಾಜೀವ್‌ಗಾಂಧಿಯವರು ಅನುಸರಿಸುತ್ತಿದ್ದ ರಿಯಾಯಿತಿ ಧೋರಣೆ ಹಾಗೂ ಇತರ ಕೆಲವು ಘಟನೆಗಳು ಈ ಶಂಕೆಗೆ ಎಡೆ ಕೊಟ್ಟಿದ್ದವು.

ಈಗ ಈ ಶಂಕೆ ನಿಜವಾಗುತ್ತಿರುವಂತೆ ಕಾಣುತ್ತಿದೆ. ಪಾಕಿಸ್ತಾನ ಒಂದು ಸಣ್ಣ ದೇಶ, ಭಾರತ ಅದರ ಬಗ್ಗೆ ತಲೆಕೆಡಿಸಿಕೊಳ್ಳ ಬೇಕಾಗಿಲ್ಲ ಎಂಬ ಅಮೆರಿಕನ್ನರ ಮಾತನ್ನು ಅವರು ಒಪ್ಪಿಕೊಂಡಂತೆ ಕಾಣುತ್ತಿದೆ. ತಮ್ಮ ಪತ್ರಿಕಾ ಸಮ್ಮೇಳನದಲ್ಲಿ ಅವರು ಅದನ್ನು ಹೇಳಿದ್ದಾರೆ ಕೂಡಾ.ಆದರೆ ಪ್ರಶ್ನೆ ಪಾಕಿಸ್ತಾನದ ಗಾತ್ರವಲ್ಲ, ಆ ಸಣ್ಣ ದೇಶವನ್ನು ಅತ್ಯಂತ ಉತ್ಕೃಷ್ಟ ಶಸ್ತ್ರಾಸ್ತ್ರಗಳಿಂದ ಸಜ್ಜಿತಗೊಳಿಸಲಾಗುತ್ತಿದೆಯಾದ್ದರಿಂದ ಶಸ್ತ್ರಾಸ್ತ್ರ ಸಮತೋಲನ ಆ ದೇಶದತ್ತ ವಾಲುತ್ತಿದೆ. ಅಲ್ಲದೆ ಆ ದೇಶ ಪೆಂಟಗಾನ್‌ನ ರಾಗಕ್ಕೆ ತಾಳಹಾಕುವ ಮಿಲಿಟರಿ ಸರ್ವಾಧಿಕಾರಿಯೊಬ್ಬನ ಆಳ್ವಿಕೆಯಲ್ಲಿದೆ ಇಸ್ರೇಲ್ ಪಾಕಿಸ್ತಾನಕ್ಕಿಂತಲೂ ಸಣ್ಣ ದೇಶ ಆದರೆ ಅಮೆರಿಕನ್• ಸೈನಿಕ ಗ್ಯಾಂಗ್‌ನ ಶಸ್ತ್ರಾಸ್ತ್ರಗಳಿಂದ ಅದು ಅರಬ್‌ದೇಶಗಳ ಸ್ವಾತಂತ್ರ್ಯಕ್ಕೆ ಎಂತಹ ಆಪತ್ತು ಉಂಟು ಮಾಡುತ್ತಿದೆಯೆನ್ನುವುದು ಎಲ್ಲರಿಗೂ ತಿಳಿದ ವಿಷಯ.

ಬಹುಶಃ ಪಾಕಿಸ್ತಾನ ಪರಮಾಣು ಅಸ್ತ್ರ ತಯಾರಿಸುವ ಹಂತ ತಲುಪಿದೆಯೆಂದು ತಿಳಿದು ಬಂದ ಮೇಲೆ ಪಾಕಿಸ್ತಾನದ ಬಗ್ಗೆ ಅಮೆರಿಕನ್ ನಿಲುವು ಬದಲಾಗಿದೆ ಎಂದು ರಾಜೀವಗಾಂಧಿ ಭಾವಿಸುತ್ತಾರೆ. ಆದರೆ ಇದು ಕೇವಲ ಒಂದು ನೆಪ ಏಕೆಂದರೆ ಪಾಕಿಸ್ತಾನಕ್ಕೆ ಒಂದಿಲ್ಲೊಂದು ಹೆಸರಿನಲ್ಲಿ ಅಮೆರಿಕನ್ ಶಸ್ತ್ರಾಸ್ತ್ರ ನೆರವು ಮುಂದುವರಿಯುತ್ತಲೇ ಇದೆ ಅಮೆರಿಕಾದ ಸಾಮರಿಕ ಯೋಜನೆಯಲ್ಲಿ ಪಾಕಿಸ್ತಾನಕ್ಕೆ ಈಗಲೂ ಮಹತ್ವದ ಸ್ಥಾನವಿದೆಯೆಂದು ಅಮೆರಿಕನ್ ಆಳುವ ವಲಯ ಈಗಲೂ ಪದೇ ಪದೇ ಸ್ಪಷ್ಟ ಪಡಿಸುತ್ತಿದೆ.ಇತ್ತೀಚಿಗೆ ಇನ್ನಷ್ಟು ಸೈಡ್‌ವಿಂಡರ್ ಹಾಗೂ ಹಾರ್ಪೂನ್ ಕ್ಷಿಪಣಿಗಳನ್ನು ಪಾಕಿಸ್ತಾನ ಪಡೆದಿದೆ. ಇದು ಅಫಘಾನಿಸ್ತಾನದಲ್ಲಿ ಸೋವಿಯೆತ್‌ಗಳ ವಿರುದ್ಧ ಬಳಸಲು ಮಾತ್ರವೇನು? ಪಾಕಿಸ್ತಾನ ಬಾಂಬು ತಯಾರಿಸುವ ಬಗ್ಗೆ ಭಾರತದ ಆತಂಕ ಹಾಗೂ ಪ್ರತಿಭಟನೆಗಳನ್ನು ಅಮೆರಿಕಾ ತಳ್ಳಿಹಾಕಿದೆ ಸಿ.ಐ.ಎ. ಭಾರತದಲ್ಲಿ ಏನೂ ಮಾಡುತ್ತಿಲ್ಲ ಎಂಬ ಉಪಾಧ್ಯಕ್ಷ ಬುಷ್‌ರವರ ಹೇಳಿಕೆಯನ್ನು ಯಾರು ಗಂಭೀರವಾಗಿ ಪರಿಗಣಿಸುತ್ತಿಲ್ಲ.

(6ನೇ ಪುಟ ನೋಡಿ)

ಕಾಂಗ್ರೈಗೆ ಪರ್ಯಾಯ ಯಾವುದು ? ಎಡ ಮತ್ತು ಜಾತ್ಯಾತೀತ ಶಕ್ತಿಗಳು ಮಾತ್ರ

ಕಾಂಗ್ರೆಸ್ ಪಕ್ಷಕ್ಕೆ ಪರ್ಯಾಯವಾಗಿರತಕ್ಕಂಥ ಏಕೈಕ ಶಕ್ತಿ, ಜನರೆದುರಿಸುತ್ತಿರುವ ಸಾವಿರಾರು ಸಮಸ್ಯೆಗಳಿಗೆ ಪರಿಹಾರ ಒದಗಿಸಬಲ್ಲ ಒಂದೇ ಶಕ್ತಿ ಎಡ ಮತ್ತು ಜಾತ್ಯಾತೀತ ಶಕ್ತಿಗಳು ಮಾತ್ರ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿ ಈಗ ಮೂರು ರಾಜ್ಯಗಳಲ್ಲಿ ಅಧಿಕಾರದಲ್ಲಿರುವ ಎಡರಂಗದಲ್ಲಿ, ಪ್ರಧಾನ ಪಾತ್ರದಲ್ಲಿ ಮುಖಂಡತ್ವದಲ್ಲಿರುವ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದ ಎಡ ಮತ್ತು ಜಾತ್ಯಾತೀತ, ಪ್ರಜಾಪ್ರಭುತ್ವ ಶಕ್ತಿಗಳು ಮಾತ್ರ ಕಾಂಗ್ರೈಗೆ ಪರ್ಯಾಯವಾಗ ಬಲ್ಲದೆಂಬುದನ್ನು ಚರಿತ್ರೆ ತೋರಿಸಿಕೊಟ್ಟಿದೆ. ಇತ್ತೀಚಿಗಿನ ಘಟನೆಗಳು ಅದಕ್ಕೆಸಾಕ್ಷಿ ನೀಡಿವೆ. ಸ್ವಾತಂತ್ರ್ಯ ಪಡೆದ ನಂತರ ನಮ್ಮ ದೇಶದ ಹಲವಾರು ರಾಜ್ಯಗಳಲ್ಲಿ ಕಾಂಗ್ರೆಸ್-ಕಮ್ಯುನಿಸ್ಟೇತರ ಪಕ್ಷಗಳು ಸಂಯುಕ್ತ ಸರಕಾರ ರಚಿಸಿದ್ದವು. 1967-1972ರಲ್ಲಿ ಉತ್ತರ ಪ್ರದೇಶ, ಪಂಜಾಬ್‌ಗಳಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷ ಕೂಡ ಜನ ಸಂಘದ ಜೊತೆ ಸೇರಿ ಸರಕಾರ ರಚಿಸಿ ಆಡಳಿತೆ ನಡೆಸಿತ್ತು. ಹಾಗೂ ಕೇರಳದಲ್ಲಿಕಾಂಗ್ರೈ ಜೊತೆ ಸೇರಿ ದೀರ್ಘಕಾಲ ಅಧಿಕಾರ ಚಲಾಯಿಸಿತ್ತು. 1975 ತುರ್ತುಪರಿಸ್ಥಿತಿ, ಜಯಪ್ರಕಾಶನಾರಾಯಣ ಅವರ ಚಳುವಳಿ ದೇಶದ ಜನ ಸಂಘ, ಸಂಸ್ಥಾ ಕಾಂಗ್ರೆಸ್, ಪ್ರಜಾಸೋಶಲಿಸ್ಟ್ ಪಾರ್ಟಿ, ಸಂಯುಕ್ತ ಸೋಶಲಿಸ್ಟ್ ಪಕ್ಷಗಳನ್ನೆಲ್ಲಾ ವಿಲೀನ ಗೊಳಿಸಿ ಜನತಾ ಪಕ್ಷದ ರಚನೆಗೆ ನಾಂದಿ ಹಾಕಿತು. 1977 ರ ಚುನಾವಣೆಯಲ್ಲಿ ಬಂಡವಾಳಶಾಹಿ ರಾಜಕೀಯ ಪಕ್ಷಗಳೂ, ಎಸ್.ಎಸ್.ಪಿ, ಪಿ.ಎಸ್.ಪಿ. ಗಳೂ, ಕಟ್ಟಾ ಜಾತೀವಾದಿ ಜನ ಸಂಘಗಳೆಲ್ಲ ಒಂದಾಗಿ ಜನತಾ ಪಕ್ಷವಾಗಿ ಚುನಾವಣೆ ಸ್ಪರ್ಧಿಸಿದಾಗ ತುರ್ತು ಪರಿಸ್ಥಿತಿಯನ್ನು ವಿರೋಧಿಸಿ, ಜನತೆಯ ನಾಗರೀಕ ಪ್ರಜಾಪ್ರಭುತ್ವ ಹಕ್ಕುಗಳಿಗಾಗಿ ಹೋರಾಡಿದ, ಈ ಜನತಾ ಪಕ್ಷದೊಡನೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಚುನಾವಣಾ ಹೊಂದಾಣಿಕೆ ಮಾಡಿಕೊಂಡಿದ್ದು. ಆದರೆ ತಾನು ಯಾವುದೇ ಸರಕಾರದಲ್ಲಿ ಪಾಲ್ಗೊಳ್ಳುವುದಿಲ್ಲ ಸರಕಾರಕ್ಕೆ ಬೆಂಬಲ ಕೊಡುವ, ಜನವಿರೋಧಿ ನೀತಿ ಅನುಸರಿಸಿದಾಗ ಅದನ್ನು ವಿರೋಧಿಸುವ ಹಕ್ಕನ್ನು ಕಾದಿಟ್ಟುಕೊಂಡಿತು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ. ಆ ಕಾರಣದಿಂದಲೇ 1979ರ ಕಾರ್ಮಿಕ ಸಂಘಟನೆಯ ಹೋರಾಟದ ಹಕ್ಕುಗಳನ್ನು ಮೊಟಕುಗೊಳಿಸಲು ಪ್ರಯತ್ನ ನಡೆಸಿದಾಗ, ಹರಿಜನ-ಗಿರಿಜನರ ಮೇಲೆ ಅತ್ಯಾಚಾರ ನಡೆಸಿದಾಗ, ರೈತರ ಸಮಸ್ಯೆಗಳನ್ನು ಬಗೆ ಹರಿಸಲು ನಿರಾಕರಿಸಿದಾಗ, ಅತಿ ಪ್ರಸರಣ, ಬೆಲೆ ಏರಿಕೆಗಳನ್ನು ತಡೆಗಟ್ಟಲು ವಿಫಲಗೊಂಡಾಗ, ಆರ್.ಎಸ್.ಎಸ್-ಜನ ಸಂಘಗಳೊಳಗಿನ ದ್ವಿಸದಸ್ಯ ಪ್ರಶ್ನೆಯನ್ನು ಬಗೆ ಹರಿಸಲಾರದಾಗ, ತಂತಮ್ಮೊಳಗ ಅಧಿಕಾರಕ್ಕಾಗಿ ತೀವ್ರ ಕಚ್ಚಾಟ ನಡೆದು ಕೊನೆಗೆ ಆಂತರಿಕ ಜಗಳದಲ್ಲೇ ಅಧಿಕಾರ ಕಳಕೊಂಡಾಗ ಸಿ.ಪಿ.ಐ. (ಎಂ) ತನ್ನ ನಿಲುವನ್ನು ಬದಲಾಯಿಸಲಿಲ್ಲ. ಜನತಾ ಪಕ್ಷದಲ್ಲಿದ್ದ ಜಾತೀಯ ಗುಂಪುಗಳನ್ನೂ ಕಮ್ಯುನಿಸ್ಟ್ ವಿರೋಧಿ ವಿದೇಶಿ ಗುಂಪುಗಳೊಡನೆ ಸಂಪರ್ಕ ಇಟ್ಟುಕೊಂಡಿದ್ದ ಜಾರ್ಜ್ ಫರ್ನಾಂಡಿಸ್ ಅಂಥವರನ್ನೂ ವಿರೋಧಿಸಿತ್ತು. ಮೊರಾರ್ಜಿ ಸರಕಾರ ತಟಸ್ಥ ನೀತಿಯನ್ನು ಮುಂದುವರೆಸುವಂತೆಯೂ, ಚೀನಾ ದೊಡನಿನ ಸಂಬಂಧ ಸುಧಾರಿಸುವಂತೆಯೂ ಸಿ.ಪಿ.ಐ.(ಎಂ) ಒತ್ತಾಯ ತರುತ್ತಿತ್ತು. ಜನತಾ ಪಕ್ಷದೊಳಗೆ ಆರ್.ಎಸ್.ಎಸ್ ಪ್ರಭಾವ ಬೆಳೆಯುತ್ತಿದ್ದುದನ್ನು ವಿರೋಧಿಸಿತು.

ಯಾವುದೇ ನಿರ್ದಿಷ್ಟವಾದ ರಾಜಕೀಯ ನಿಲುವು, ಕಾರ್ಯಕ್ರಮಗಳಿಲ್ಲದ ಜನತಾ ಪಕ್ಷ 19 ತಿಂಗಳಲ್ಲೇ ತನ್ನ ಅಧಿಕಾರ ಕಳೆದು ಕೊಂಡದ್ದಷ್ಟೇ ಅಲ್ಲ, ಭಾರತೀಯ ಜನತಾಪಕ್ಷ, ಲೋಕದಳ ಜನತಾ ಪಕ್ಷಗಳಾಗಿ ಹೋಳಾದವು. ಆನಂತರದ ದಿನಗಳಲ್ಲಿ ತಾವೇ ಕಾಂಗ್ರೈಗೆ ಪರ್ಯಾಯವೆಂಬ ಜಂಭ ಕೊಚ್ಚಿಕೊಂಡವು. ಆದರೆ ಆನಂತರ ನಡೆದ ಚುನಾವಣೆಗಳಲ್ಲಿ ಸಿ.ಪಿ.ಐ.(ಎಂ)ಪಕ್ಷ, ಅದರ ನೇತೃತ್ವದಲ್ಲಿ ರಚಿಸಲ್ಪಟ್ಟಿರುವ ಎಡರಂಗ ಪಶ್ಚಿಮ ಬಂಗಾಳ, ತ್ರಿಪುರ, ಗಳಲ್ಲೂ, ಇತ್ತೀಚೆಗೆ ಸಿ.ಪಿ.ಐ. (ಎಂ) ಪಕ್ಷದ ನೇತೃತ್ವದಲ್ಲಿ ರಚಿಸಲ್ಪಟ್ಟ ಎಡ ಪ್ರಜಾಪ್ರಭುತ್ವ ರಂಗ ಕೇರಳದಲ್ಲೂ ದೇಶದ ಇಂದಿನ ಪರಿಸ್ಥಿತಿಯಲ್ಲಿ ಕಾಂಗ್ರೈಗೆ ಪರ್ಯಾಯ ಶಕ್ತಿಯಾಗಿ ಬೆಳೆಯಲು, ಉಳಿಯಲು ಸಾಧ್ಯವೆಂಬುದನ್ನು ತೋರಿಸಿಕೊಟ್ಟಿದೆ. ಹಿಂದೂ ಪುನರುತ್ಥಾನವೇ ತನ್ನ ಮೂಲಗುರಿಯನ್ನಾಗಿಟ್ಟುಕೊಂಡಿರುವ ರಾಷ್ಟ್ರೀಯ ಸ್ವಯಂ ಸೇವಕ ಸಂಘವನ್ನೇ ತನ್ನ ಮೂಲತಾಯಿಬೇರನ್ನಾಗಿಟ್ಟು ಕೊಂಡಿರುವ ಭಾರತೀಯ ಜನತಾ ಪಕ್ಷ ಹಲವಾರು ಧರ್ಮ-ಜಾತಿಗಳನ್ನು ಹೊಂದಿರುವ ಭಾರತ ದೇಶದಲ್ಲಿ ಪರ್ಯಾಯ ರಾಜಕೀಯ ಪಕ್ಷವಾಗಿ ಬೆಳೆದು ಬರುವ ಕನಸು ನನಸಾಗಲು ಸಾಧ್ಯವಿಲ್ಲ. ಕಟ್ಟಾಜಾತಿವಾದಿಗಳ, ಮೇಲ್ಮಟ್ಟದ ಕೆಲವೇ ವಿಶಿಷ್ಟ ಜಾತಿ, ಗುಂಪಿನ ಬೆಂಬಲ ಹೊಂದಿರುವ "ಫ್ಯಾಸಿಸ್ಟ" ತರ ಸಿದ್ಧಾಂತದ ಆ ಪಕ್ಷ ಪರ್ಯಾಯ ಪಕ್ಷವಾಗಿ ಉಳಿಯಲು ಸಾಧ್ಯವಿಲ್ಲ. ಕಾಂಗ್ರೈಯಂತೆಯೇ ಮತ್ತೊಂದು ಪಕ್ಷ ಜನತಾ ಪಕ್ಷ. ಕಾಂಗ್ರೈಯಲ್ಲಿ ಅಸಮಾಧಾನ ಗೊಂಡ, ಅಧಿಕಾರ ಪಡೆಯಲು ವಿಫಲಗೊಂಡು, ಅಧಿಕಾರ ಗದ್ದುಗೆಯ ಮೇಲೆ ಕಣ್ಣಿಟ್ಟ ಕಾಂಗ್ರೆಸ್ಸಿನವರೂ, ನಗರ ಗ್ರಾಮಾಂತರದಲ್ಲಿಯ ಪಟ್ಟಭದ್ರ ಹಿತಾಸಕ್ತಿಗಳೂ, ಕೋಮುಸುದ್ದೀನ ಸಂತ ಜಾತಿವಾದಿಗಳೂ, ಸತಿಯನ್ನು ಬೆಂಬಲಿಸುವಂಥವರೂ, ಕೆಲವೆಡೆ ಜಾತೀಯ ದಂಗೆಗಳಿಗೆ ಪ್ರಚೋದನೆ ನೀಡುವವರೂ ಜನತಾ ಪಕ್ಷದಲ್ಲಿದ್ದಾರೆ. ಕಾಂಗ್ರೆಸ್ ಪಕ್ಷದಲ್ಲಿ ತಾವು ಗಳಿಸಿದ ಕೆಟ್ಟ ಗುಣಗಳನ್ನೆಲ್ಲ ಬಿಟ್ಟು, ಬದಲಾಗುತ್ತಿರುವ ವಾತಾವರಣದಲ್ಲಿ ಸ್ವಲ್ಪ ಮಟ್ಟಿಗಾದರೂ ಪ್ರಜಾಪ್ರಭುತ್ವ ರೀತಿಯಲ್ಲಿ ಆಡಳಿತೆ ನಡೆಸಲಿಕ್ಕೂ, ದೇಶಿಯ ವಿದೇಶಿಯ ಧೋರಣೆಗಳನ್ನು ಜನ ಹಿತ ದೃಷ್ಟಿಯಿಂದ ಮುಂದುವರಿಸಿಕೊಂಡು ಹೋಗುವುದಕ್ಕೂ ಹಿಂದೇಟು ಹಾಕುತ್ತಿರುವುದನ್ನು ಜನತಾ ಮುಖಂಡರಲ್ಲಿ ಕಾಣಬಹುದಾಗಿದೆ. ಜಾತೀಯ ಆಧಾರದಲ್ಲಿಯೇ ಆಡಳಿತೆ ನಡೆಸುವ ಗುಣವನ್ನು ತ್ಯಜಿಸಲು ಜನತಾ ಪಕ್ಷ ತಯಾರಿಲ್ಲೆಂಬುದನ್ನು ಕರ್ನಾಟಕದಲ್ಲಿ ಸ್ಪಷ್ಟ ತೋರ್ಪಡಿಸುತ್ತಿದೆ. ಬಿಹಾರ ಮತ್ತಿತರ ರಾಜ್ಯಗಳಲ್ಲಿಯೂ ಜನತಾ ಪಕ್ಷ ಜಾತಿ ಆಧಾರದ ಮೇಲೆ ನಿಂತಿದೆ. ಆ ಕಾರಣದಿಂದಲೇ ಅದು ಪರ್ಯಾಯ ಶಕ್ತಿಯಾಗಿ ಬೆಳೆದು ಬರಲು ಅವಕಾಶಗಳಿದ್ದರೂ, ಬೆಳೆಯುವ ಲಕ್ಷಣಗಳಿಲ್ಲದಿರುವುದನ್ನು ಕಾಣಬಹುದಾಗಿದೆ.

ಕಾಂಗ್ರೆಸ್(ಐ)ಗೆ ಪರ್ಯಾಯ ರೂಪಿಸಲು ದೇಶದ ಎಡ-ಪ್ರಜಾಸತ್ತಾತ್ಮಕ ಜಾತ್ಯಾತೀತ ಶಕ್ತಿಗಳನ್ನು ಬೆಳೆಸಿ ಅಖಿಲ ಭಾರತ ಮಟ್ಟದ ಹಾಗೆಯೇ ಕರ್ನಾಟಕ ರಾಜ್ಯ ಮಟ್ಟದ ಮಜ್ದೂರ್ ಕಿಸಾನ್ ಜಾಥಾ ಯಶಸ್ವಿ ಮಾಡಲು ಶ್ರಮಿಸೋಣ.

ಬೋಫೋರ್ಸ್, ಸ್ವಿಸ್ ಬ್ಯಾಂಕ್ ಪ್ರಕರಣಗಳಲ್ಲಿಯ ಭ್ರಷ್ಟಾಚಾರದ ಕಾರಣದಿಂದ ಮಾಜಿ ರಕ್ಷಣಾ ಮಂತ್ರಿ ವಿ ಪಿ.ಸಿಂಗ್ ಕಾಂಗ್ರೈ ಬಿಟ್ಟು ಹೊರಗೆ ಬಂದ ನಂತರ, ಜನತಾ, ಬಿ.ಜೆ.ಪಿ. ಲೋಕದಳಗಳೆಲ್ಲ ಅವರ ಜೊತೆ ಸೇರಿ ಕಾಂಗ್ರೈಗೆ ಪರ್ಯಾಯ ಪಕ್ಷ ರಚಿಸುವ ಪ್ರಯತ್ನ ನಡೆಸಿವೆ. ಭ್ರಷ್ಟಾಚಾರಕ್ಕಾಗಿ ರಾಜೀವ್‌ಗಾಂಧಿ ರಾಜೀನಾಮೆ ಕೊಡಬೇಕು ಎಂಬ ಒಂದೇ ಕಾರಣವನ್ನು ಮುಂದೆ ಮಾಡಿ ಕಮ್ಯುನಿಸ್ಟ್ ಪಕ್ಷಗಳನ್ನೊಳಗೊಂಡು ಎಲ್ಲರೂ ಒಟ್ಟಾಗಿ ರಾಜೀವ್ ಗಾಂಧಿಯವರ ರಾಜೀನಾಮೆ ಕೇಳಬೇಕು, ಮಧ್ಯಂತರ ಚುನಾವಣೆ ನಡೆಸಬೇಕೆಂಬ ಒಮ್ಮತದ ಅಭಿಪ್ರಾಯ ಮೂಡಿಸುವ ಪ್ರಯತ್ನ ನಡೆಯಿತು. ಆದರೆ ಬಿ ಜೆ.ಪಿ ಯೊಡನೆ ಸೇರಿ ರಾಜೀವ್‌ಗಾಂಧಿ ವಿರುದ್ಧ ಸಂಯುಕ್ತ ಚಳುವಳಿ ನಡೆಸಬೇಕೆಂಬ ಹರಿಯಾಣ ಮುಖ್ಯಮಂತ್ರಿ ದೇವಿಲಾಲರ ಪ್ರಯತ್ನಕ್ಕೆ ಜನ ಬೆಂಬಲ ಸಿಗಲಿಲ್ಲ. ಬಂಡವಾಳಶಾಹಿ ವಿರೋಧ ಪಕ್ಷಗಳೊಳಗೂ ಒಮ್ಮತ ಉಂಟಾಗಲಿಲ್ಲ. ಎನ್.ಟಿ.ರಾಮರಾವ್, ಹೆಗಡೆಯಂಥವರೂ ದೇವಿಲಾಲರ ಪ್ರಯತ್ನಕ್ಕೆ ಕುಮ್ಮಕ್ಕು ಕೊಡುವುದಕ್ಕೆ ಹಿಂದೇಟು ಹಾಕಿದ ಕಾರಣ ಅದು ಚಿಗುರಿಕೊಳ್ಳುವ ಲಕ್ಷಣಗಳಿಲ್ಲ. ರಾಜೀವಗಾಂಧಿಯವರ ರಾಜೀನಾಮೆಗೆ ಒತ್ತಾಯಿಸುವ ಚಳುವಳಿಯಲ್ಲಿ ಬಿ.ಜೆ.ಪಿ. ಯಂಥ ಜಾತೀಯ ಪಕ್ಷಗಳನ್ನು ಸೇರಿಕೊಳ್ಳುವುದಕ್ಕೆ ಸಿ.ಪಿ.ಐ.(ಎಂ) ಹಾಗೆಯೇ ಇತರ ಎಡ ಪಕ್ಷಗಳೆಲ್ಲ ವಿರೋಧ ವ್ಯಕ್ತಪಡಿಸಿವೆ. 1983-84 ರಲ್ಲಿ ಶ್ರೀನಗರ ಕಲ್ಕತ್ತಗಳಲ್ಲಿಸಮಾವೇಶಗೊಂಡಿದ ಬಿ ಜೆ ಪಿ. ಬಿಟ್ಟು ಇತರ ವಿರೋಧ ಪಕ್ಷಗಳ ಮತ್ತು ಮುಖ್ಯಮಂತ್ರಿಗಳ ಸಭೆಯಲ್ಲಿ 7 ಅಂಶಗಳ ಕಾರ್ಯಕ್ರಮದ ಆಧಾರದಲ್ಲಿ ದೇಶಾದ್ಯಂತ ರಾಜಕೀಯ ಪ್ರಕ್ಷೋಭೆ ನಡೆಸಬೇಕೆಂದೂ ಜನಸಮೂಹವೆಲ್ಲ ಅಂಥ ಆಂದೋಲನದಲ್ಲಿ ಪಾಲ್ಗೊಳ್ಳುವಂತೆ ಮಾಡಿ ರಾಜೀವ್ ಗಾಂಧಿಯವರ ರಾಜೀನಾಮೆ ಕೇಳಬೇಕೆಂದೂ ಸಿ.ಪಿ.ಐ. (ಎಂ) ಒತ್ತಾಯಿಸುತ್ತಾ ಬಂದಿದೆ.

ಆದರೆ ರಾಮಕೃಷ್ಣ ಹೆಗಡೆ, ಎನ್.ಟಿ ರಾಮರಾವ್ ಮತ್ತು ಇತರ ವಿರೋಧ ಪಕ್ಷಗಳು ಆ ಕಾರ್ಯಕ್ರಮದ ತಳಹದಿಯಲ್ಲಿ ಚಳುವಳಿ ಹೂಡಲು ತಯಾರಿದ್ದಂತೆ ಕಂಡು ಬರುವುದಿಲ್ಲ. ನಿರ್ದಿಷ್ಟ ಸಮಸ್ಯೆಗಳ ಕುರಿತಾಗಲೀ ಚಳುವಳಿ ಮಾಡೋಣ ಎಂಬ ಸಿ.ಪಿ.ಐ.(ಎಂ) ಸಲಹೆಗೂ ಅವರೆಲ್ಲ ಒಪ್ಪುವಂತೆ ಕಾಣುವುದಿಲ್ಲ. ಜನರು ಎದುರಿಸುತ್ತಿರುವಹಲವಾರುಸಮಸ್ಯೆಗಳಕುರಿತು ಅವರೆಲ್ಲಚಳುವಳಿ ಹೂಡಲು, ದುಡಿಯುವ ವರ್ಗ ಆ ಚಳುವಳಿಯಲ್ಲಿ ಶಾಮೀಲಾಗುವಂತೆ ಮಾಡಲು ವಿರೋಧ ಪಕ್ಷಗಳು ತಯಾರಿದ್ದಂತೆ ಕಾಣುವುದಿಲ್ಲ.

ಆ ಕಾರಣದಿಂದಲೇ ಸಿ ಪಿ.ಐ.(ಎಂ) ಎಡ ಪಕ್ಷಗಳಾದ ಸಿ.ಪಿ.ಐ, ಪುರೋಗಾಮಿ ಪಕ್ಷ, ಆರ್.ಎಸ್.ಪಿ.ಗಳೊಡನೆ ಸೇರಿ ಅಕ್ಟೋಬರ್ 12 ರಂದು ದೇಶದ ಸಮಗ್ರತೆಗಾಗಿ, ಜಾತೀಯತೆ ವಿರುದ್ಧ ದಿಲ್ಲಿಯಲ್ಲಿ ಸಮ್ಮೇಳನನಡೆಸಿ ಆ ಎರಡು ಸಮಸ್ಯೆಗಳಿಗಾಗಿ ದೇಶಾದ್ಯಂತ ಚಳುವಳಿ ನಡೆಸುವ ಕರೆ ನೀಡಿತ್ತು. ಅದಾದ ನಂತರ, ಈ ನಾಲ್ಕು ಎಡ ಪಕ್ಷಗಳ ನೇತೃತ್ವದಲ್ಲಿರುವ ಕಾರ್ಮಿಕ, ರೈತ, ವಿದ್ಯಾರ್ಥಿ, ಯುವ ಜನತೆ, ಮಹಿಳಾ ಸಂಘಟನೆಗಳ ಪ್ರತಿನಿಧಿಗಳಸಭೆಕರೆದು, ದೇಶದ ಸಮಗ್ರತೆಗಾಗಿ, ಪಂಥವಾದಿಗಳ ಛಿದ್ರಕಾರಿ ಶಕ್ತಿಗಳ ವಿರುದ್ಧ, ಬೆಲೆಯೇರಿಕೆ, ನಿರುದ್ಯೋಗ, ಭೂಸುಧಾರಣೆ, ಕನಿಷ್ಟವೇತನ, ಉತ್ತಮಶಿಕ್ಷಣ, ಉದ್ಯೋಗ ಮೂಲಭೂತ ಹಕ್ಕಾಗುವುದು, ಮೇಲ್ಮಟ್ಟದಲ್ಲಿ ಭ್ರಷ್ಟಾಚಾರ, ಅತ್ಯಾವಶ್ಯಕ ವಸ್ತುಗಳ ವಿತರಣೆಯಲ್ಲಿ ಸುಧಾರಣೆ, ರೈತ ಬೆಳೆದಬೆಳೆಗೆ ನ್ಯಾಯ ಬೆಲೆ, ಹರಿಜನ-ಗಿರಿಜನ ಮಹಿಳೆಯರ ಮೇಲೆ ದೌರ್ಜನ್ಯ ಮುಂತಾದ 17 ಬೇಡಿಕೆಗಳ ಸಲುವಾಗಿ, ದೇಶಾದ್ಯಂತ ಚಳುವಳಿ ನಡೆಸಿ ಡಿಸೆಂಬರ್ 9 ರಂದು ದಿಲ್ಲಿಯಲ್ಲಿ ಬೃಹತ್ ಮತಪ್ರದರ್ಶನ ನಡೆಸುವ ಹಾಗೆಯೇದೇಶದ5ಮೂಲೆಗಳಿಂದ ಜಾಥಾಗಳನ್ನು ಹೊರಡಿಸುವ ನಿರ್ಣಯ ಕೈಗೊಳ್ಳಲಾಗಿದೆ. ಜನರು ಎದುರಿಸುತ್ತಿರುವ ಸಮಸ್ಯೆಗಳನ್ನು ಎತ್ತಿತೋರಿಸಿ ಅವುಗಳಿಗೆಲ್ಲ ಕಾರಣೀಭೂತರಾರೆಂಬುದನ್ನು ಜನರಿಗೆಮನದಟ್ಟುಮಾಡಿಕೊಟು ಆಸಮಸ್ಯೆಗಳಿಗೆ ಪರಿಹಾರಕಂಡುಕೊಳ್ಳಬೇಕಾಗಿದ್ದರೆ ಈಗಿರುವಬಂಡವಾಳಶಾಹಿ ಭೂಮಾಲಿಕ ಪರ ಕಾಂಗ್ರೈ ಸರಕಾರವನ್ನು ಅಧಿಕಾರದಿಂದ ಕೆಳಗಿಳಿಸುವುದು ಮಾತ್ರವಲ್ಲ, ಅದೇ ರೀತಿಯ ವರ್ಗಹಿತ ರಕ್ಷಣೆ ಮಾಡುವ ಜನತಾ, ಲೋಕದಳ ಬಿ.ಜೆ.ಪಿ. ಪಕ್ಷಗಳು ಅಧಿಕಾರಕ್ಕೆ ಬರುವಂತೆ ಮಾಡುವುದೂ ಅಲ್ಲ. ಬದಲಾಗಿ ಎಡ ಮತ್ತು ಜಾತ್ಯಾತೀತ ಶಕ್ತಿಗಳನ್ನು ಸಂಘಟಿಸಿ, ಅದೇಪರ್ಯಾಯ ಶಕ್ತಿಯಾಗಿ ಅಧಿಕಾರಕ್ಕೆ ಬರುವಂತೆ ಮಾಡುವುದು ಅತ್ಯಗತ್ಯವೆಂಬಂಶವನ್ನು ವಿಸ್ತಾರವಾಗಿ ಪ್ರಚಾರಗೊಳಿಸಿ, ಈ ಚಳುವಳಿಯಲ್ಲಿ ದುಡಿಯುವ ಜನತೆ ಎಲ್ಲರೂ ಭಾಗವಹಿಸುವಂತೆ ಮಾಡುವ ಕರೆ ನೀಡಿವೆ. ಈ ರೀತಿ ಚಳುವಳಿ ನಡೆದದ್ದೇ ಆದರೆ ಬಲಶಕ್ತಿಯ ಪ್ರಭಾವ ಕುಂಠಿತಗೊಳಿಸಿ,ಎಡಶಕ್ತಿಯ ಪ್ರಭಾವ ಹೆಚ್ಚಿಸಬಹುದಾಗಿದೆ.

ಎಡ ಮತ್ತು ಜಾತ್ಯಾತೀತ ಶಕ್ತಿ ಒಂದೇ ಕಾಂಗ್ರೈಗೆ ಪರ್ಯಾಯವಾಗಬಲ್ಲದು ತ್ರಿಪುರ, ಪಶ್ಚಿಮಬಂಗಾಳ, ಕೇರಳ ಚುನಾವಣೆಗಳೂ, ದೇಶ ಎದುರಿಸುತ್ತಿರುವಸಮಸ್ಯೆಗಳಿಗೆಸಿ.ಪಿ.ಐ.(ಎಂ) ತೋರಿಸುತ್ತಿರುವ ರಾಜಕೀಯ ಪರಿಹಾರಗಳು ಅದನ್ನು ಸ್ಪಷ್ಟವಾಗಿ ತೋರಿಸಿಕೊಟ್ಟಿದೆ. ವಿದೇಶಿ ಧೋರಣೆಯ ಕುರಿತಾಗಲೀ, ಪಂಜಾಬ್-ಅಸ್ಸಾಂ, ಶ್ರೀಲಂಕಾ ಸಮಸ್ಯೆಗಳ ವಿಷಯದಲ್ಲಾಗಲೀ, ಭಯೋತ್ಪಾದಕರ,ಜಾತೀಯ ಸಮಸ್ಯೆಗಳ, ಭೂಸುಧಾರಣೆ,ಹಾಗೆಯೇ ಇತರ ಸಮಸ್ಯೆಗಳ ಕುರಿತು ಸಿ.ಪಿ.ಐ. (ಎಂ) ನಿಲುವೆ ಮಾತ್ರ ಪರಿಹಾರ ಒದಗಿಸಬಲ್ಲುದೆಂಬಂಶ ಜನ ಸಾಮಾನ್ಯರಲ್ಲಿ ಮೂಡಿಬರುತ್ತಿದೆ. ಇಂದಿನ ಪರಿಸ್ಥಿತಿಯಲ್ಲಿಸಿ.ಪಿ.ಐ (ಎಂ)ಹೇಳುವಂತೆ, ಎಡ ಮತ್ತು ಜಾತ್ಯಾತೀತ ಶಕ್ತಿಗಳೇ ಕಾಂಗ್ರೈಗೆ ಪರ್ಯಾಯವಾಗಲುಸಾಧ್ಯ. ಆದ್ದರಿಂದ ಎಡ ಮತ್ತು ಜಾತ್ಯಾತೀತ ಶಕ್ತಿಯನ್ನು ಬೆಳೆಸಲಿಕ್ಕೆ ಎಲ್ಲರೂ ಪ್ರಯತ್ನಿಸಬೇಕು. ಅದಕ್ಕಾಗಿ ಅಖಿಲ ಭಾರತ ಮಟ್ಟದ ಹಾಗೆಯೇ ಕರ್ನಾಟಕದ ಮಜ್ದೂರ್ ಕಿಸಾನ್ ಜಾಥಾವನ್ನು ಯಶಸ್ವಿಮಾಡಲು ಶ್ರಮಿಸಬೇಕು. ●

-ಎನ್. ಕೆ. ಉಪಾಧ್ಯಾಯ

ಇಂಡಿಯನ್ ಎಕ್ಸ್‌ಪ್ರೆಸ್ ಮುಷ್ಕರ
ಬಯಲಿಗೆ ಬಿದ್ದ ಬಿ ಜೆ ಪಿ, ಶೌರಿ ಕುತಂತ್ರ

ಪ್ರಕಾಶ್ ಕಾರಟ್

ಅರುಣ್‌ಶೌರಿ ಗೋಯಂಕರ ಹಿಂಬಾಲಕರಾಗಿ ಇಂಡಿಯನ್ ಎಕ್ಸ್‌ಪ್ರೆಸ್‌ನ ನೌಕರರು ನ್ಯಾಯಯುತವಾಗಿ ನಡೆಸಿದ್ದ ಮುಷ್ಕರದಲ್ಲಿ ತಲೆಹಾಕಿದ್ದಾರೆ. ಇವರೊಂದಿಗೆ ಬಿ.ಜೆ.ಪಿ. ಮತ್ತು ಆರ್.ಎಸ್.ಎಸ್. ನೇರವಾಗಿ ಬಂಡವಾಳಶಾಹಿ ಪರ, ಕಾರ್ಮಿಕ ವಿರೋಧಿ ನೀತಿಯನ್ನು ತಳೆದಿದ್ದಾರೆ. ದೆಹಲಿಯ ಬಿ.ಜೆ.ಪಿ. ಅಧ್ಯಕ್ಷ ಮದನ್‌ಲಾಲ್ ಖುರಾನ, ಬಿ.ಜೆ.ಪಿ. ಎಂ.ಪಿ. ಜಸ್ವಂತ್‌ಸಿಂಗ್ ಮತ್ತು 'ದೇಶಭಕ್ತ' ಗುಂಪು ನೌಕರರ ಜೊತೆ ಕೈ ಕೈ ಮಿಲಾಯಿಸಿದ್ದಾರೆ. ಆರ್.ಎಸ್.ಎಸ್. ನವರು ತಮ್ಮ ಬೆಳಗಿನಶಾಖೆಗಳಿಂದ ನೇರವಾಗಿ ಖಾಕಿ ಚಡ್ಡಿ ತೊಟ್ಟು ಬಹಿರಂಗವಾಗಿ ಈ ಕೃತ್ಯ ನಡೆಸಿದ್ದಾರೆ. ಅರುಣ್‌ಶೌರಿ ದೆಹಲಿ ಪೋಲೀಸರು ಆರ್.ಎಸ್.ಎಸ್. ನವರ ಬೆಂಬಲಕ್ಕೆ ಬರುವಂತೆ ನೋಡಿಕೊಂಡರು. ಇದರಿಂದ ಇಂಡಿಯನ್ ಎಕ್ಸ್‌ಪ್ರೆಸ್ ಬಳಗ ಮಾತ್ರವಲ್ಲದೆ ಪಕ್ಕದ ಟೈಮ್ಸ್ ಆಫ್ ಇಂಡಿಯಾ ಗುಂಪೂಸಹ ಪೆಟ್ಟುತಿನ್ನಬೇಕಾಯಿತು.

ಅರುಣ್‌ಶೌರಿ, ಜನಸತ್ತಾ ಸಂಪಾದಕ ಪ್ರಭಾಕರ್ ಜೋಷಿ, ಗುರುಮೂರ್ತಿ ಒಂದೆಡೆ ಆರ್.ಎಸ್.ಎಸ್. ಬಿ.ಜೆ.ಪಿ. ಇನ್ನೊಂದೆಡೆ, ದೆಹಲಿ ಪೋಲೀಸರು ಮತ್ತೊಂದೆಡೆ ಜಯ ಸಾಧಿಸಿದರು. ಆದರೆ ಇದು ಹೆಚ್ಚು ಹೊತ್ತು ನಿಲ್ಲಲಿಲ್ಲ. ಎಲ್ಲಾ ಪತ್ರಿಕಾ ನೌಕರರು ಪಕ್ಕದ ಬಹದ್ದೂರ್ ಶಾ ಜಫರ್ ಮಾರ್ಗ್‌ನಲ್ಲಿ ಸೇರಿ ಆರ್.ಎಸ್.ಎಸ್. ಹಾಗೂ ಬಿ.ಜೆ.ಪಿ. ಈ ನಾಚಿಕೆಗೇಟ ಕೃತ್ಯವನ್ನು ಖಂಡಿಸಿದರು. ಪತ್ರಿಕಾ ನೌಕರರ ಬಲದ ಮುಂದೆ ಶೌರಿಯ ಯಾವ ನೀತಿಯೂ ಕೆಲಸ ಮಾಡಲಿಲ್ಲ. ಫಲವಾಗಿ ಅಕ್ಟೋಬರ್ 29ರ ಸಂಚಿಕೆ ಹೊರಬರಲು ಸಾಧ್ಯವಾಗಲಿಲ್ಲ.

ಬಿ.ಜೆ.ಪಿ.,ಆರ್.ಎಸ್.ಎಸ್ ಶೌರಿಯ ನೀತಿಯನ್ನು ಪ್ರತಿಭಟಿಸಿ ಎಲ್ಲಾ ಪತ್ರಿಕೆಗಳೂ ಒಗ್ಗಟ್ಟಾದವು ಟೈಮ್ಸ್ ಆಫ್ ಇಂಡಿಯಾ, ನವ ಭಾರತ್ ಟೈಮ್ಸ್, ಹಿಂದೂಸ್ತಾನ್ ಟೈಮ್ಸ್, ದೈನಿಕ್‌ಹಿಂದೂಸ್ತಾನ್, ಪೇಟ್ರಿಯಟ್‌ನವರು ಬೆಂಬಲ ನೀಡಿದರಲ್ಲದೆ ಆ ದಿನ ಯಾವ ಪತ್ರಿಕೆಯೂ ಹೊರ ಬೀಳಲಿಲ್ಲ. ಶೌರಿಯ ಹೇಯ ಕೃತ್ಯವನ್ನು ಖಂಡಿಸಿ 286 ಪತ್ರಕರ್ತರು ಬಿ.ಜೆ.ಪಿ. ಮತ್ತು ಆದರ ಎಲ್ಲಾ ಸಂಘಟನೆಗಳ ಕಾರ್ಯಕ್ರಮಗಳನ್ನು ಬಹಿಷ್ಕರಿಸುವ ನಿರ್ಣಯ ಕೈಗೊಂಡು ಪತ್ರಿಕಾ ಹೇಳಿಕೆ ನೀಡಿದರು.

ಇದರಿಂದ ಬೆದರಿದ ಬಿ.ಜೆ.ಪಿ.ಯ ಖುರಾನ ಹೇಳಿಕೆ ನೀಡಿ ಪಕ್ಷ ಈ ಕೃತ್ಯದಲ್ಲಿ ಭಾಗವಹಿಸಲಿಲ್ಲ, ಕೆಲವರು ತಾವೇ ನಿರ್ಧಾರತೆಗೆದುಕೊಂಡಿದ್ದಾರೆಎಂದರು. ಅರುಣ್‌ಶೌರಿಯವರೂ ತಮ್ಮ ರಾಗ ಬದಲಿಸಬೇಕಾಯಿತು. ಅರುಣ್‌ಶೌರಿಯವರಿಗೆ ಪತ್ರಿಕಾ ಸ್ವಾತಂತ್ರ್ಯ ಎಂದರೆ ಪತ್ರಿಕೆಯಮಾಲೀಕರ ಸ್ವಾತಂತ್ರ್ಯ ಎಂದಾಗಿದೆ. ಟೈಮ್ಸ್ ಆಫ್ ಇಂಡಿಯಾ ಈ ಬಗ್ಗೆ ಸಂಪಾದಕೀಯದಲ್ಲಿ ಬರೆಯುತ್ತಾ ಆಡಳಿತ ಹಾಗೂ ನೌಕರರ ನಡುವಿನ ವಿವಾದದಲ್ಲಿ ಸಂಪಾದಕ ಯಾರೆಡೆಯೂ ವಾಲಬಾರದು. ಆದರೆ ಇಂಡಿಯನ್ ಎಕ್ಸ್‌ಪ್ರೆಸ್ ಉದಾಹರಣೆಯಲ್ಲಿ ಶೌರಿ ನೇರವಾಗಿ ಆಡಳಿತ ವರ್ಗದ ಏಜೆಂಟರಂತೆ ವರ್ತಿಸಿದ್ದಾರೆ ಎಂದಿದೆ.

ಅರುಣ್‌ಶೌರಿಯ ಬಂಡವಾಳಶಾಹಿ ಏಜೆಂಟನ ಬಣ್ಣ ಬಯಲಾಗಿದೆ. ಕಮ್ಯುನಿಸ್ಟರಿಗೆ ಅರುಣ್‌ಶೌರಿಯ ಈ ಬಣ್ಣ ಮೊದಲೇ ಗೊತ್ತಿತ್ತು. ಅಸ್ಸಾಂನಲ್ಲಿ ಅಲ್ಪಸಂಖ್ಯಾತರ ಮೇಲೆ ನಡೆದ ಹಲ್ಲೆ, ಮುಸ್ಲಿಮರಮೇಲೆಆರ್.ಎಸ್.ಎಸ್.ನ ನಗ್ನ ಕೃತ್ಯಗಳನ್ನು ಶೌರಿ ಬಹಿರಂಗವಾಗಿ ಸಮರ್ಥಿಸಿಕೊಂಡಿದ್ದಾರಲ್ಲದೆ ಎ.ಎಸ್.ಯು.ನ ರಾಯಭಾರಿಗಳಂತೆ ವರ್ತಿಸಿದ್ದಾರೆ. ಕಮ್ಯುನಿಸ್ಟರ ಬಗೆಗೆ ಸದಾ ಅಪಪ್ರಚಾರ ಮಾಡುತ್ತಲೇ ಇರುವ ಶೌರಿ ಅವರನ್ನು ಸಂಪಾದಕೀಯದಲ್ಲಿ ಪದೇ ಪದೇ ಖಂಡಿಸುತ್ತಲೇ ಇದ್ದಾರೆ.

ಆಡಳಿತ ವರ್ಗದ ಪರವಾಗಿ ನಿಂತ ಹಲವು ಬೂರ್ಜ್ವಾ ವಿರೋಧಿ ಪಕ್ಷಗಳು ಬಿ.ಜೆ.ಪಿ.ಯ ಬಗ್ಗೆ ಮತ್ತೊಮ್ಮೆ ಯೋಚಿಸಬೇಕಾಗಿದೆ. ರಾಜೀವ್ ಸರ್ಕಾರದ ವಿರುದ್ಧ ಈ ಪ್ರತಿಗಾಮಿ ಶಕ್ತಿಗಳೊಂದಿಗೆ ಹೋರಾಡುವುದು ಎಷ್ಟು ಮೂರ್ಖತನ ಎಂಬುದನ್ನು ಮತ್ತೆ ಅವರು ಯೋಚಿಸಲಿ. ●

"ಇಂಡಿಯನ್ ಎಕ್ಸ್‌ಪ್ರೆಸ್"ನ ದೆಹಲಿ ಪ್ರಕಟಣೆ ನಿಲ್ಲಿಸಿದ್ದರ ಹಿಂದೆ 'ಖ್ಯಾತ' ಪತ್ರಕರ್ತ ಅರುಣ್‌ಶೌರಿಯವರ ಬಣ್ಣ ಬಯಲಿಗೆ ಬಿದ್ದಿದೆ. 'ಪತ್ರಿಕಾ ಸ್ವಾತಂತ್ರ್ಯ' ಎಂದು ಪದೇ ಪದೇ ತನ್ನ ಸಂಪಾದಕೀಯಗಳಲ್ಲಿ ಮಾತನಾಡುವ ಅರುಣ್‌ಶೌರಿಯವರ ನಿಜವಾದ ಪತ್ರಿಕಾ ಸ್ವಾತಂತ್ರ್ಯದ ಕಲ್ಪನೆ ಇಂದು ಎಲ್ಲಾ ಪತ್ರಕರ್ತರಿಗೆ ಗೊತ್ತಾಗಿದೆ. ಅರುಣ್‌ಶೌರಿ ಮಾತ್ರವೇ ಅಲ್ಲದೆ ಇಡೀಪ್ರಕರಣದಲ್ಲಿ ಮೂಗುತೂರಿಸಿ ಆರ್.ಎಸ್.ಎಸ್. ಹಾಗೂ ಬಿ.ಜೆ.ಪಿ. ತನ್ನ "ಜನಪರ" ನೀತಿಯನ್ನು ತೋರಿಸಿವೆ.

ಪಂಜಾಬ್ ನಿಧಿಗೆ ಮೈಕೋ ಕಾರ್ಮಿಕರ ಕೊಡುಗೆ

ದೇಶದ ಸಮಗ್ರತೆ-ಐಕ್ಯತೆಯನ್ನು ಕಾಪಾಡಲು ಪ್ರತ್ಯೇಕತಾವಾದಿ ಖಾಲಿಸ್ತಾನ್‌ವಾದಿ ಭಯೋತ್ಪಾದಕರನ್ನು ಎದುರಿಸಿ ಹೋರಾಡುತ್ತಿರುವ ಪಂಜಾಬ್ ಸಂಗಾತಿಗಳ ರಕ್ಷಣೆಗಾಗಿ ಪಕ್ಷದ ಕೇಂದ್ರ ಸಮಿತಿ ನೀಡಿದ 'ಪಂಜಾಬ್ ನಿಧಿ'ಕರೆಯಂತೆ ಬೆಂಗಳೂರಿನ ಮೈಕೋ ಕಾರ್ಮಿಕರಿಂದ ಒಂದು ಸಾವಿರದ ಒಂದು ನೂರು ರೂಪಾಯಿಗಳನ್ನು ಸಂಗ್ರಹಿಸಿ ಕಾ. ನವರಸನ್ ಡಿ.ಡಿ. ಮೂಲಕ ದೆಹಲಿಯ ಪಕ್ಷದ ಕೇಂದ್ರ ಸಮಿತಿಗೆ ಕಳುಹಿಸಿದ್ದಾರೆ. ನಿಧಿಗೆ ನೆರವು ನೀಡಿದ ಸಂಗಾತಿಗಳು ಕಾ. ವಿದಾತೇ 50ರೂ.25 ರೂ.ನೀಡಿದವರುಎಸ್.ಟಿ. ಅರಸು, ಪಾಂಡಿಯನ್, ಕೃಷ್ಣಪ್ಪ, ಶಿವಕುಮಾರ್, ಶಿವಶಂಕರ್, ಮಹಾದೇವಪ್ಪ, ಪ್ರಭುಮಾಸ್ಟರ್, ಸುರೇಶ್, ಗೋವಿಂದರಾಜ್, ಚಂದ್ರಶೇಖರ್‌ರಾವ್, ರಂಗರಾಮಯ್ಯ, ವೆಂಕಟೇಶ್, ಸದಾಶಿವರೆಡ್ಡಿ, ಶಂಕರಪ್ಪ,ದೇವದಾಸ್, ಮಹಾದೇವಯ್ಯ, ದೇವರಾಜ್ ಮಧುಸೂಧನ್, ನಂಜಯ್ಯ, ರಾಮಲಿಂಗಮ್ ಮುಂದಪ್ಪ, ಮೋಹನ್,ಮುನಿಸ್ವಾಮಿ, ರಾಮಕೃಷ್ಣ, ದೊರೈಸ್ವಾಮಿ, ಸಿದ್ದಯ್ಯ, ಚಿಕ್ಕಣ್ಣ,ಸಿಂಧೇ, ಶ್ರೀಧರ್ ಶ್ರೀನಿವಾಸ್, ತಿಮ್ಮೇಗೌಡ, ಮೂರ್ತಿ, ವೆಂಕಟೇಶ್ ಯಜ್ಞನಾರಾಯಣ, ನರಸಿಂಹಯ್ಯ, 20ರೂ ನೀಡಿದವರು ಶಂಕರೇಗೌಡ, ಬೈಲಪ್ಪ, ಜಯರಾಂ, ತಿಮ್ಮಯ್ಯ, ಅನ್ಬರಸನ್, 10ರೂ ನೀಡಿದವರು ಸುಕುಮಾರ್, ಗೋಪಾಲ ಕೃಷ್ಣಚಾರ್, 5ರೂ ನೀಡಿದವರು ಅರೀಫ್, ನಾಗರಾಜ್, ಗೋವಿಂದ ಸ್ವಾಮಿ, ವೀರಸ್ವಾಮಿ, 2 ರೂ ನೀಡಿದವರು ದತ್ತ ಚಾಯಾಯಿನಿ, ಕೃಷ್ಣಪ್ಪ, ಈರಣ್ಣ, ವರದರಾಜ್, ಪ್ರಭು, ಮೂರ್ತಿಯವರುಗಳಿಂದ ಸಂಗ್ರಹಿಸಲಾಗಿದೆ. ರಾಜ್ಯದಲ್ಲಿಯೇ ಪ್ರಥಮರಾಗಿ ಪಂಜಾಬ್ ನಿಧಿ ಸಂಗ್ರಹಿಸಿ ನೀಡುತ್ತಿರುವ ಮೈಕೋ ಕಾರ್ಮಿಕರು ಅಭಿನಂದನಾರ್ಹರು. ○

ಭೂರಹಿತರಿಗೆ ಹಕ್ಕುಪತ್ರಕ್ಕೆ ಒತ್ತಾಯ

ಕುಂದಾಪುರ ತಾಲ್ಲೋಕು ಸಾಲಿಗ್ರಾಮ ಪುರಸಭೆ ವ್ಯಾಪ್ತಿಯ ಕಾರ್ಕಡ ಪ್ರದೇಶದಲ್ಲಿ ರೈತ ಕೃಷಿ ಕೂಲಿಗಾರರ ಸಭೆ ಕಾ.ಮಯ್ಯರ ಅಧ್ಯಕ್ಷತೆಯಲ್ಲಿ ಅಕ್ಟೋಬರ್ 23ರಂದು ಜರುಗಿತು. ಕಾ.ವಿಠಲ ಪೂಜಾರಿ, ತಾಲ್ಲೋಕು ರೈತ ಸಂಘದ ಕಾರ್ಯದರ್ಶಿ ಯವರುಗಳು ಸಭೆಯಲ್ಲಿ ಮಾತನಾಡಿ ರೈತ ಕೃಷಿ ಕೂಲಿಗಾರರ ಸಮಸ್ಯೆ ಪರಿಹಾರಕ್ಕಾಗಿ ಸಂಘಟಿತರಾಗಿ ಹೋರಾಟ ನಡೆಸಲು ಕರೆ ನೀಡಿದರು. ದೇಶಕ್ಕೆ ಸ್ವಾತಂತ್ರ್ಯ ದೊರೆತು 40 ವರ್ಷಗಳು ಕಳೆದರೂ ಗ್ರಾಮಾಂತರ ಜನರ ಕನಿಷ್ಠ ಅವಶ್ಯಕತೆಗಳನ್ನು ಒದಗಿಸುವಲ್ಲಿ ವಿಫಲವಾಗಿರುವ ರಾಜೀವ್‌ಗಾಂಧಿ ಸರ್ಕಾರವನ್ನು ಬದಲಿಸಬೇಕೆಂದು ಹೇಳಿದರು. ಕಾ.ನರಸಿಂಹ ದೇವಾಡಿಗ ಮತ್ತು ಸೀತಾರಾಮ ಬಾಯಿರಿಯವರುಸಂಚಾಲಕರಾಗಿರುವ 12 ಜನರ ಸಮಿತಿಯನ್ನು ರಚಿಸಲಾಯಿತು. ○

ನಗರದಲ್ಲಿ ಸೋವಿಯತ್ ಮಹಾಕ್ರಾಂತಿ
70 ನೇ ವಾರ್ಷಿಕೋತ್ಸವ

ಸೋವಿಯತ್ ರಷ್ಯಾದಲ್ಲಿ ಕಾರ್ಮಿಕವರ್ಗದ ನೇತೃತ್ವದಲ್ಲಿ 1917 ಅಕ್ಟೋಬರ್‌ನಲ್ಲಿ ನಡೆದ ಕ್ರಾಂತಿಯ 70ನೇ ವಾರ್ಷಿಕೋತ್ಸವವನ್ನು ಬೆಂಗಳೂರಿನಲ್ಲಿ ಆಚರಿಸಲಾಯಿತು ಸಿ.ಐ.ಟಿ.ಯು. ಅಖಿಲ ಭಾರತ ಉಪಾಧ್ಯಕ್ಷ ಹಾಗೂ ರಾಜ್ಯ ಅಧ್ಯಕ್ಷ ಕಾ. ಎಸ್. ಸೂರ್ಯನಾರಾಯಣರಾವ್ ಅಧ್ಯಕ್ಷತೆ ವಹಿಸಿದ್ದರು. ನಗರದ ಸಿಲ್ವರ್ ಜೂಬ್ಲಿ ಪಾರ್ಕ್‌ನಲ್ಲಿ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ಮೊದಲಿಗೆ ಕಾ.ಪಿ.ಜಗನ್ನಾಥ್ ಮಾತನಾಡಿದರು. ಕಾ.ಜಿ.ಎನ್. ನಾಗರಾಜ್‌ರವರು ಮಾತನಾಡುತ್ತಾ ಸೋವಿಯತ್ ಕ್ರಾಂತಿ ಭಾರತದ ಸ್ವಾತಂತ್ರ್ಯ ಚಳುವಳಿಯ ಮೇಲೆ ಬೀರಿದ ಪ್ರಭಾವದಿಂದ ಭಾರತದಕ್ರಾಂತಿಕಾರಿಗಳು ಕಾ.ಲೆನಿನ್‌ರವರ ಸಲಹೆ ಸಹಾಯ ಪಡೆದು 1920ರಲ್ಲಿ ತಾಷ್ಕೆಂಟ್‌ನಲ್ಲಿ ಕಮ್ಯೂನಿಸ್ಟ್ ಪಕ್ಷ ಸ್ಥಾಪನೆಯಲ್ಲಿ ಮೊದಲ ಘಟ್ಟ ಪ್ರಾರಂಭವಾಯಿತೆಂದು ಹೇಳಿದರು. ಯೂರೋಪಿನಲ್ಲಿ ಮಹಾ ಕುಸಿತದಿಂದ ಉಪವಾಸ ಸಾವಿರಾರು ಜನತೆ ಸಾಯುತ್ತಿದ್ದ ದಾರುಣ ಸ್ಥಿತಿಯಲ್ಲಿದ್ದರೆ ಮತ್ತೊಂದೆಡೆ ಸೋವಿಯೆತ್‌ರಷ್ಯಾದಲ್ಲಿ ಪಂಚವಾರ್ಷಿಕಯೋಜನೆಗಳ ಮೂಲಕ ಸುಖ ಸಮೃದ್ಧಿಯನ್ನು ಸಾಧಿಸುವ ಮೂಲಕ ಜಗತ್ತಿಗೆಆಶಾಕಿರಣವಾಗಿತ್ತು ಎಂದರು. ಭಾರತದಲ್ಲಿ ಟ್ರೇಡ್‌ಯೂನಿಯನ್, ಸ್ಟೂಡೆಂಟ್ಸ್ ಫೆಡರೇಷನ್, ಕಿಸಾನ್ ಸಭಾ, ಸಾಹಿತಿಗಳ ಸಂಘಟನೆಗಳು ಆರಂಭಗೊಳ್ಳಲು ಹಾಗೂ ಭಾರತದಲ್ಲಿ ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ಆಡಳಿತ ಕೊನೆಗೊಳಿಸಿ ಸಂಪೂರ್ಣ ಸ್ವರಾಜ್ಯ ಸಾಧಿಸುವ ದೇಶವ್ಯಾಪಿಚಳುವಳಿಗೆ ಸ್ಫೂರ್ತಿ ನೀಡಿದರು.

2 ನೇ ಮಹಾಯುದ್ಧ ಕಾಲದಲ್ಲಿ ಫ್ಯಾಸಿಸ್ಟ್ ಇಟ್ಲರ್‌ನ ವಿರುದ್ಧ ಸೋವಿಯೆತ್ ರಷ್ಯಾ ಜಯ ಸಾಧಿಸದಿದ್ದರೆ ಭಾರತಕ್ಕೆ ಸ್ವಾತಂತ್ರ್ಯ ಮಾತ್ರವಲ್ಲ ಇಡೀ ವಿಶ್ವ ಫ್ಯಾಸಿಸ್ಟ್ ದುರಾಡಳಿತಕ್ಕೊಳಗಾಗ ಬೇಕಾಗಿತ್ತೆಂದು ಹೇಳಿದರು. ಮುಂದಿನ ಘಟ್ಟಗಳ ಕುರಿತು ಮಾತನಾಡುತ್ತಾ ಸೋವಿಯೆತ್‌ರಷ್ಯಾ 1949ರ ಚೀನಾ ಕ್ರಾಂತಿಯಿಂದ ಪ್ರಾರಂಭಗೊಂಡು ವಿಶ್ವದ ಮೂರನೇ ಒಂದು ಭಾಗದಲ್ಲಿ ಸಮಾಜವಾದಿ ಸರ್ಕಾರಗಳು ಮೂಡಿಬರಲು ಹಾಗೂ ವಿಮೋಚನೆಗೊಳ್ಳಲು ಸಹಾಯ ಮಾಡಿದೆ ಎಂದು ವಿವರಿಸಿದರು.

ಸೋವಿಯೆತ್‌ರಷ್ಯಾ-ಅಮೇರಿಕಾದ ಬಲಾಬಲ ಕುರಿತು ಪತ್ರಿಕೆಗಳು ಸತ್ಯ ಸಂಗತಿಗಳನ್ನು ಪ್ರಕಟಿಸದೇ ಸಾಮ್ರಾಜ್ಯಶಾಹಿಗಳ ಸುದ್ದಿಗಳನ್ನು ಮಾತ್ರ ಪ್ರಕಟಿಸಲಾಗುತ್ತಿದೆ ಎಂದು ಆರೋಪಿಸಿದರು. ಅಧ್ಯಕ್ಷ ಭಾಷಣ ಮಾಡಿದ ಕಾ॥ಸೂರ್ಯನಾರಾಯಣರಾವ್ ರವರು ದುಡಿಯುವ ಜನತೆ ತನ್ನ ಸಂಕಷ್ಟಸುಲಿಗೆ ಶೋಷಣೆಯ ಸಂಕೋಲೆಕಿತ್ತೆಸೆದು ದುಡಿಯುವ ಜನತೆ ಅಧಿಕಾರಕ್ಕೆ ಬರಬೇಕೆಂದು 18 ನೇ ಶತಮಾನದಲ್ಲಿ ಕಾರ್ಲ್‌ಮಾರ್ಕ್ಸ್ ಹೇಳಿದ್ದನ್ನು ಸೋವಿಯೆತ್ ಕಾರ್ಮಿಕ ವರ್ಗ ವಿಶ್ವಾಸದಿಂದ ಸಾಧಿಸಿ ತೋರಿಸಿದೆ ಎಂದು ಹೇಳಿದರು. ಭಾರತದ ಕಾರ್ಮಿಕರಲ್ಲಿ ಆಸೆಎಂಬುದು ಮಾಯ ಎಲ್ಲವು ದೈವದತ್ತವಾದದ್ದು ಎಂಬ ಮೂಢನಂಬಿಕೆಯನ್ನು ಬಿತ್ತಲಾಗಿದೆ ಎಂದರು.

ಸೋವಿಯೆತ್‌ನ ಜನತೆ ಉದ್ಯೋಗ, ಆರೋಗ್ಯ, ವಸತಿ ಸೌಕರ್ಯ ಹೊಂದಿರುವುದನ್ನು ವಿವರಿಸಿದರು. ರಾಜೀವ್ ಗಾಂಧಿಯವರ ಹೊಸ ಆರ್ಥಿಕ ನೀತಿ, ಕೈಗಾರಿಕಾ ನೀತಿಯ ಫಲವಾಗಿ ಒಂದು ಲಕ್ಷದ ನಲವತ್ತು ಸಾವಿರ ಕೈಗಾರಿಕೆ ಮುಚ್ಚಿವೆ,ವಿದೇಶಿಬಂಡವಾಳಶಾಹಿಗಳಿಗೆ ಮುಕ್ತ ದ್ವಾರ ತೆರೆದು ಸರ್ಕಾರಿ ಕ್ಷೇತ್ರದ ಉದ್ಯಮಗಳನ್ನು ಕಡೆಗಣಿಸಲಾಗಿದೆ. ಇದರಿಂದ ಲಕ್ಷಾಂತರ ಕಾರ್ಮಿಕರು ನಿರುದ್ಯೋಗಿಗಳಾಗಲಿದ್ದು ಆಧುನಿಕರಣದ ಮೋಹದಲ್ಲಿ ದೇಶದ ಅಭಿವೃದ್ಧಿಯನ್ನು ಕಡೆಗಣಿಸಿ ಪ್ರತ್ಯೇಕತಾವಾದಿ-ಛಿದ್ರಕಾರಿ ಶಕ್ತಿಗಳನ್ನು ದಮನ ಮಾಡುವಲ್ಲಿ ವಿಫಲವಾಗಿರುವ ರಾಜೀವ ಗಾಂಧಿ ರಾಜೀನಾಮೆನೀಡಿಮಧ್ಯಾಂತರ ಚುನಾವಣೆ ನಡೆಸಬೇಕೆಂದು ಒತ್ತಾಯಿಸಿದರು. ಡಿಸಂಬರ್ 9ರ ದೆಹಲಿಚಲೋ ಜಾಥ ಯಶಸ್ವಿಗೊಳಿಸಲು ಬೆಂಗಳೂರಿನ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ಕರೆ ನೀಡಿದರು. ಕಾ. ರಮೇಶ್‌ರವರ ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯಗೊಂಡಿತು.

ವರದಿ : ರಾಜಣ್ಣ

ಸಚಿವರಿಗೆ ರೈತ ಸಂಘದ ಮನವಿ

ಮಂಗಳೂರಿನ ಕೋಟೆಕಾರು ಸರ್ಕಲ್ ರೈತ ಸಂಘದ ಆಶ್ರಯದಲ್ಲಿ ಅಕ್ಟೋಬರ್ 29ರಂದು ಇಲ್ಲಿಗೆ ಭೇಟಿ ನೀಡಿದ ಕರ್ನಾಟಕ ಸರ್ಕಾರದ ಧಾರ್ಮಿಕ ದತ್ತಿ ಸಚಿವರಿಗೆ ರೈತ ಸಂಘದ ನಾಯಕರು ಸ್ಥಳೀಯ ಬೇಡಿಕೆಗಳ ಕುರಿತು ಮನವಿ ಸಲ್ಲಿಸಲಾಯಿತು.

ಕೋಟೆಕಾರು ಗ್ರಾಮದ ಸುತ್ತಮುತ್ತಲ ಸರ್ಕಾರಿ ಸ್ಥಳದಲ್ಲಿ ನೆಲೆಸಿರುವ ಬಡ ಕುಟುಂಬಗಳಿಗೆ ಹಕ್ಕುಪತ್ರ ನೀಡಬೇಕು. ಉಳ್ಳಾಲದಿಂದ ನೇತ್ರಾವತಿ ನದಿಯವರೆವಿಗೆ ರಸ್ತೆ ನಿರ್ಮಾಣ, ಕೆ.ಇ.ಬಿ. ಕಛೇರಿಯಲ್ಲಿ ಎರಡು ಕೌಂಟರ್ ತೆರೆಯಬೇಕೆಂಬ ಪ್ರಮುಖ ಬೇಡಿಕೆಯ ಕುರಿತು ಸಚಿವರೊಡನೆ ಚರ್ಚಿಸಲಾಯಿತು, ಮನವಿ ಸ್ವೀಕರಿಸಿ ಮಾತನಾಡಿದ ಸಚಿವರು ನಿಮ್ಮ ಕೇಳಿಕೆಗಳ ಕುರಿತುಶೀಘ್ರದಲ್ಲೇ ಈಡೇರಿಸುವ ಭರವಸೆಯನ್ನು ನೀಡಿದರು. ಕಾ. ಜನಾರ್ಧನ ನಾಯಕ್, ರಾಮಚಂದ್ರ ಉಚ್ಚಿಲ್, ಸಾವ್ಲು ಡಿ.ಸೋಜರವರುಗಳು ನಿಯೋಗದ ನೇತೃತ್ವ ವಹಿಸಿದ್ದರು.

ಡಿಸೆಂಬರ್ 9 "ದಿಲ್ಲಿ ಚಲೋ" ಮಹಾ ಪ್ರದರ್ಶನಕ್ಕೆ ಮುನ್ನಡೆಯೋಣ

ರಾಜೀವ್‌ಗಾಂಧಿ ಸರ್ಕಾರದ ರಾಜೀನಾಮೆ ಕೇಳಿ ದೇಶದ ಎಲ್ಲಾ ವಿಭಾಗಗಳಿಗೆ ಸೇರಿದ ಜನತೆಯನ್ನು ಪ್ರತಿನಿಧೀಕರಿಸಿ ದೇಶದ 24 ಸಾಮೂಹಿಕ ಸಂಘಟನೆಗಳು ಜಂಟೀ ಸಭೆ ಸೇರಿ ದಿಲ್ಲಿಯಲ್ಲಿ ಡಿಸೆಂಬರ್ 9 ರಂದು ಮಹಾಪ್ರದರ್ಶನ ಮಾಡಲು ಇತ್ತ ಕರೆಯನ್ನು ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಕರ್ನಾಟಕ ರಾಜ್ಯ ಕೃಷಿ ಕೂಲಿಗಾರರ ಸಂಘಗಳ ಜಂಟಿ ಸಭೆಯು ಸ್ವಾಗತ ಮಾಡುತ್ತದೆ.

ಗುತ್ತೇದಾರಿ ಬಂಡವಾಳಶಾಹಿಗಳ ಪರ ಮತ್ತು ಜಮೀನುದಾರರ ಪರ ಧೋರಣೆಗಳುಳ್ಳ ರಾಜೀವಗಾಂಧಿಸರ್ಕಾರವು ಈಗಾಗಲೇ ಗ್ರಾಮಾಂತರದ ಸಾಧಾರಣ ಜನಸಮೂಹಗಳ ವಿಶೇಷವಾಗಿ ಬಡ ವಿಭಾಗಗಳ ಜೀವನ ಸ್ಥಿತಿಗತಿಗಳನ್ನು ತೀವ್ರ ಆಘಾತಗೊಳಿಸಿದೆ. ರೈತರ ಮತ್ತು ಕೃಷಿ ಕೂಲಿಗಾರರ ಮೇಲೆ ಭಾರವನ್ನು ಸತತವಾಗಿ ಹೆಚ್ಚಿಸುತ್ತಾ ಬಂದಿರುವ ಈ ಸರ್ಕಾರದ ವಿರುದ್ಧ ಹಾಗೂ ಅದರ ವರ್ಗಆಧಾರಿತ ಧೋರಣೆಗಳ ವಿರುದ್ಧ ಅತೃಪ್ತಿಯು ವಿಸ್ತೃತವಾಗಿ ಬೆಳೆಯುತ್ತಿದೆ. ಹೆಚ್ಚುತ್ತಿರುವ ಈ ಅತೃಪ್ತಿಯನ್ನು ಎದುರಿಸಲು ಈ ಸರಕಾರವುಪ್ರಜಾಸತ್ತಾತ್ಮಕ ವಿರೋಧಿ ಕ್ರಮಗಳನ್ನು ಅನುಸರಿಸುತ್ತಿದೆ. ದುಡಿಯುವ ಜನತೆ ಸಾಂಪ್ರದಾಯಿಕವಾಗಿ ದೃಢವಾಗಿ ಸ್ಥಾಪಿಸಲ್ಪಟ್ಟಿರುವ ಹಕ್ಕುಗಳನ್ನು ಕಿತ್ತು ಕೊಳ್ಳಲಾಗುತ್ತಿದೆ. ಹಲವಾರು ರೀತಿಯಲ್ಲಿ ಅತೃಪ್ತಿಯನ್ನು ಹತ್ತಿಕ್ಕಲು ಪ್ರಯತ್ನಿಸಲಾಗುತ್ತಿದೆ. ಅದೇ ವೇಳೆ ಕಳೆದ ಕಲವು ವರ್ಷಗಳಲ್ಲಿ ದೇಶದಲ್ಲಿವಿಭಜನಾ ಮತೀಯ ಮತ್ತು ಪ್ರತ್ಯೇಕತಾವಾದಿ ಶಕ್ತಿಗಳು ಭೀತಿ ಹುಟ್ಟಿಸುವ ರೀತಿಯಲ್ಲಿ ಬೆಳೆಯುತ್ತಿರುವುದನ್ನು ನಾವು ಕಾಣುತ್ತೇವೆ.

ದೇಶದ ಸಮಾಜಿಕ ವಾತಾವರಣವನ್ನೇ ವಿಷಕಲಿಸ ಮಾಡುತ್ತಿರುವ ಹಲವಾರು ರೂಪದ ಮತೀಯ ಮತ್ತು ಪ್ರತ್ಯೇಕತಾವಾದಿ ಘರ್ಷಣೆಗಳಲ್ಲಿ ಇದು ಪರ್ಯವಸಾನಗೊಳ್ಳುತ್ತಿದೆ. ಮತೀಯತೆ ಮತ್ತು ಪ್ರತ್ಯೇಕತೆಗಳ ವಿರುದ್ಧ ಅಕ್ಟೋಬರ್ 12 ರಂದು ನಡೆದ ದಿಲ್ಲಿ ರಾಷ್ಟ್ರೀಯ ಸಮಾವೇಶವು ದೇಶದ ಐಕ್ಯತೆ ಮತ್ತು ಸಮಗ್ರತೆಗೇನೆ ಅಪಾಯವೊಡ್ಡುತ್ತಿರುವ.ರಾಷ್ಟ್ರದ ಸಮಾಜಿಕ ಜೀವನವನ್ನೇ ಬಿರುಕುಗೊಳಿಸುತ್ತಿರುವ ಸ್ಥಿತಿಗತಿಯ ಕುರಿತು ಬೊಟ್ಟುಮಾಡಿ ತೋರಿಸಿದೆ. ಅಧಿಕಗೊಳ್ಳುತ್ತಿರುವ ಜನಸಮೂಹಗಳ ಅತೃಪ್ತಿಯ ಹಿನ್ನಲೆಯಲ್ಲಿ ಕಾಂಗ್ರೆಸ್(ಐ) ಸರ್ಕಾರವು ತನ್ನ ವರ್ಗ ಆಡಳಿತೆಗೆ ಸವಾಲು ಬಿದ್ದಾಗ, ವಿಶೇಷವಾಗಿ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳಿಂದ ಈ ಸವಾಲು ಬಂದಾಗ, ಅದು ಜಾತೀಯ–ಮತೀಯ ಶಕ್ತಿಗಳ ಜತೆ ಚೌಕಾಸಿ ಮಾಡಿಕೊಳ್ಳಲು ಹಿಂಜರಿಯಲಿಲ್ಲ. ಇದರಿಂದಾಗಿ ಈ ದುಷ್ಟ ಜಾತೀಯ–ಮತೀಯ ಶಕ್ತಿಗಳು ಎದ್ದು ನಿಲ್ಲಲು ಸಕ್ರಿಯವಾಗಿ ಬೆಳೆದು ಬರಲು ಒಂದು ಹೊಸ 'ಗೌರವ ಸ್ಥಾನ' ದೊರಕುವಂತಾಗಿದೆ. ರಾಷ್ಟ್ರವನ್ನು 21ನೇ ಶತಮಾನಕ್ಕೆ ಕೊಂಡೊಯ್ಯಲಾಗುವುದು ಎಂದು ಸಾರುತ್ತಿರುವಾಗಲೇ ಇದೇ ಆಡಳಿತೆಯಡಿಯಲ್ಲಿ 'ಸತಿ'ಯಂತಹ ಹೀನಾಯವಾದ ಕೃತ್ಯವು ಪುನರುಜ್ಜೀವನಗೊಂಡಿದೆ. ಹಾಗೆಯೇ ಒಂದು ಕೇಂದ್ರ ಕಾನೂನು ಮೂಲಕ ಮುಸ್ಲಿಂ ಮಹಿಳೆಯರಿಗೆ ತಮ್ಮ ಗಂಡಂದಿರಿಂದ ವಿಚ್ಛೇದಗೊಂಡಾಗ ದೊರೆಯಬೇಕಾಗಿದ್ದ ಮಾಶಾಸನದ ಹಕ್ಕನ್ನು ನಿರಾಕರಿಸಲಾಗಿದೆ.

ಇದಕ್ಕೆಲ್ಲಾ ಕಳಶ ಪ್ರಾಯವೆಂಬಂತೆ ಉನ್ನತ ವಲಯಗಳಲ್ಲಿವಿಸ್ತೃತ ಭ್ರಷ್ಟಾಚಾರದ ಕತೆಗಳು ಹರಡಿವೆ. ವಿಶೇಷವಾಗಿ, ರಕ್ಷಣಾ ಕಂಟ್ರಾಕ್ಟ್‌ರ್‌ಗಳಿಗೆ ಸಂಬಂಧಿಸಿ,ಅಂತಹಕಂಟ್ರಾಕ್ಟ್‌ಗಳನ್ನು ಪಡೆಯುವ ಸಲುವಾಗಿ ಎಲ್ಲಾ ವಿಧಾನಗಳ ಮೂಲಕ ಮಧ್ಯವರ್ತಿಗಳು 'ಹಣ'ವನ್ನು ನುಂಗಿ ಹಾಕುತ್ತಿದ್ದಾರೆ. ದೇಶದ ಬಹು ಭಾಗದ ಜನತೆಯ ಕಣ್ಣುಗಳಲ್ಲಿ ಭೋಫಾರ್‌ಗನ್ ವ್ಯವಹಾರದ ಕುರಿತು ನ್ಯಾಯವಾದ ತನಿಖೆ ನಡೆಸಲು ರಾಜೀವಗಾಂಧಿ ತೋರಿಸುತ್ತಿಸುವ ಹಿಂಜರಿಕೆಯಿಂದಾಗಿ ಈ ಸರ್ಕಾರದ ಕುರಿತು ನಂಬಿಕೆ ನಾಶವಾಗಿದೆ.

ಸಾಮಾನ್ಯ ಜನಸಮೂಹಗಳ ಮೇಲೆ ಹೆಚ್ಚುತ್ತಿರುವ ಆರ್ಥಿಕ ಭಾರದ ಹಿನ್ನಲೆಯಲ್ಲಿ ಜನತೆಯ ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲೆ ಬೆಳೆಯುತ್ತಿರುವ ಆಕ್ರಮಣಗಳ ಹಿನ್ನೆಲೆಯಲ್ಲಿಭೀತಿ ಹುಟ್ಟಿಸುವ ರೀತಿಯಲ್ಲಿ ಅಧಿಕಗೊಳ್ಳುತ್ತಿರುವ ಮತೀಯ ಮತ್ತು ವಿಭಜನಾ ಚಟುವಟಿಕೆಗಳ ಹಿನ್ನಲೆಯಲ್ಲಿ ಮತ್ತು ಉನ್ನತವಲಯಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಬೆಳೆಯುತ್ತಿರುವ ಭ್ರಷ್ಟಾಚಾರದ ಹಿನ್ನೆಲೆಯಲ್ಲಿ, ಪಶ್ಚಿಮ ಬಂಗಾಳ, ಕೇರಳ, ಮತ್ತು ಹರಿಯಾಣಗಳಲ್ಲಿ ಮಧ್ಯಂತರ ಚುನಾವಣೆಗಳನ್ನು ಎದುರಿಸಲಾಯಿತು. ಇವುಗಳಲ್ಲೆಲ್ಲಾ ನಿರ್ಣಯಕವಾಗಿ ಕಾಂಗ್ರೆಸ್(ಐ) ಸೋಲು ಅನುಭವಿಸಿತು. ಇವುಗಳೆಲ್ಲವೂ ಗ್ರಾಮಾಂತರ ಜನ ಸಮೂಹಗಳನ್ನೊಳಗೊಂಡ ಎಲ್ಲಾ ಸಾಮಾನ್ಯ ಜನವಿಭಾಗಗಳ ಅತೃಪ್ತಿ ಮತ್ತು ಅಸಮಾಧಾನ ಬೆಳೆಯುತ್ತಿರುವುದಕ್ಕೆ ಸಾಕ್ಷಿಯಾಗಿದೆ. ನಮ್ಮ ಈ ಎರಡು ಸಂಘಟನೆಗಳಜಂಟೀ ಸಭೆಯು ರಾಜೀವಗಾಂಧಿ ಸರ್ಕಾರವು ಸಾಮಾನ್ಯ ಜನತೆಯ ವಿಶ್ವಾಸವನ್ನು ಕಳೆದುಕೊಂಡಿದೆ ಎಂಬ ಅಭಿಪ್ರಾಯ ತಾಳುತ್ತದೆ. ಎಲ್ಲಾವಿಭಾಗಗಳ ರೈತರೂ ಮತ್ತು ಕೃಷಿಕೂಲಿಗಾರರೂ ರಾಜೀವ ಗಾಂಧಿ ಸರಕಾರ ರಾಜೀನಾಮೆ ಕೊಡಬೇಕೆಂದು ಅಭಿಪ್ರಾಯ ಪಡುತ್ತವೆ. ಆದಕಾರಣ, "ದಿಲ್ಲಿ ಚಲೋ" ಕರೆಯು ಅತ್ಯಂತ ಸಮಯೋಚಿತವಾಗಿದೆ.

ಆದಕಾರಣ, ಕರ್ನಾಟಕ ರಾಜ್ಯದ ಎಲ್ಲಾ ವಿಭಾಗಗಳ ರೈತರು ಮತ್ತು ಕೃಷಿಕೂಲಿಗಾರರು ಈ ಕರೆಗೆ ಮನಃಪೂರ್ವಕವಾಗಿ ಪ್ರತಿಸ್ಪಂದಿಸಬೇಕೆಂದು ನಮ್ಮ ಜಂಟೀ ಸಭೆಯುವಿನಂತಿಸುತ್ತದೆ.

ನವಂಬರ್ 20ರಂದು ಬೆಳ್ಳಿಗೆ 7ಕ್ಕೆ ತಮಿಳುನಾಡಿನ ಮತ್ತು ಕರ್ನಾಟಕದ ಗಡಿಯಾದ ಹೊಸೂರಿಗೆ ಎಲ್ಲಾ ಕಡೆಗಳಿಂದ ಬರುವ ಜಾಥಾಗಳಿಗೆ ಗುಲ್ಬರ್ಗಾ, ಬಿಜಾಪುರ, ಮಂಗಳೂರು ಮತ್ತು ಮೈಸೂರು-ದಾರಿಯುದ್ದಕ್ಕೂ ಮತ್ತು ವಿಶೇಷವಾಗಿ ಬೆಂಗಳೂರಿನಲ್ಲಿ 'ಹೃದಯಂಗಮ'ವಾದ ಸ್ವಾಗತವೀಯಬೇಕೆಂದು ರಾಜ್ಯದ ರೈತರಿಗೂ, ಕೃಷಿ ಕೂಲಿಗಾರರಿಗೂ ಜಂಟೀ ಸಭೆಯು ಕರೆ ಕೊಡುತ್ತದೆ. ●

ದಕ್ಷಿಣ ಭಾರತ ಜಾಥ-1

ನವಂಬರ್		
10	ರಂದು ತ್ರಿವೇಂಡ್ರಮ್	ಸಂಜೆ ಹೊರಡುತ್ತದೆ.
11	ಅಟ್ಟಿಂಗಲ್	ಊಟ
	ಕ್ವಿಲಾನ್	ರಾತ್ರಿ ತಂಗುವುದು
12	ಕಯಂಕುಲಂ	ಊಟ
	ಅಲೆಪ್ಪಿ	ರಾತ್ರಿ ತಂಗುವುದು
13	ಶೆರ್‌ತಲ್ಲೈ	ಊಟ
	ಎರ್ನಾಕುಲಂ	ರಾತ್ರಿ ತಂಗುವುದು
14	ಅಂಕಮಲ್ಲೈ	ಊಟ
	ತ್ರಿಚೂರು	ರಾತ್ರಿ ತಂಗುವುದು
15	ವದಕ್ಕಾಂಚೇರಿ	ಊಟ
	ಪಾಲ್ಘಾಟ್	ರಾತ್ರಿ ತಂಗುವುದು
16	ಪೊಲಾಚ್ಚಿ	ಊಟ
	ಕೊಯಂತ್ತೂರು	ರಾತ್ರಿ ತಂಗುವುದು
17	ಅವಿನಾಶಿ	ಊಟ
	ತಿರುಪೂರು	ರಾತ್ರಿ ತಂಗುವುದು
18	ಪಿರಂದುರೈ	ಊಟ
	ಇರೋಡು	ರಾತ್ರಿ ತಂಗುವುದು
19	ತಿರಿಚಂಗೋಡಿ	ಊಟ
	ಸೇಲಂ	ರಾತ್ರಿ ತಂಗುವುದು
20	ಧರ್ಮಪುರಿ	ಊಟ
	ಹೊಸೂರು	ಟೀ
	ಬೆಂಗಳೂರು	ರಾತ್ರಿ ತಂಗುವುದು
21	ಕೋಲಾರ	ರಾತ್ರಿ ತಂಗುವುದು
22	ಹಿಂದೂಪುರ	ಬೆಳ್ಳಿಗೆ 10 ಗಂಟೆ
	ಆಂಧ್ರ ಪ್ರವೇಶ	
	ಅನಂತಪುರ	ರಾತ್ರಿ ತಂಗುವುದು
23	ಗುಟ್ಟಿ	ಊಟ
	ಕರ್ನೂಲ್	ರಾತ್ರಿ ತಂಗುವುದು
24	ಓನಪಾರ್ಥಿ	ಊಟ
	ಮೆಹಬೂಬ್ ನಗರ್	ರಾತ್ರಿ ತಂಗುವುದು
25	ಮಿರಿಯಾಲಗುಂಡ	ರಾತ್ರಿ ತಂಗುವುದು
26	ಹೈದ್ರಾಬಾದ್	ರಾತ್ರಿ ತಂಗುವುದು
27	ಬೊದಾನ್	ರಾತ್ರಿ ತಂಗುವುದು
28	ಆದಿಲಾಬಾದ್	ರಾತ್ರಿ ತಂಗುವುದು
29	ಪಂದರ್ಾಕವಾಡ	ಬೆಳಗ್ಗೆ 10 ಗಂಟೆಗೆ
	ಮಹಾರಾಷ್ಟ್ರ ಪ್ರವೇಶ	
	ವಾನಿ	ರಾತ್ರಿ ತಂಗುವುದು
30	ವಾರ್ದಾ	ರಾತ್ರಿ ತಂಗುವುದು
	ಡಿಸೆಂಬರ್	
1	ನಾಗಪುರ	ರಾತ್ರಿ ತಂಗುವುದು
2	ಕಾವಾಸ	2 ಗಂಟೆಗೆ
	ಸಿಯೋನಿ	ರಾತ್ರಿ ತಂಗುವುದು
3	ಜಬ್ಬಲ್‌ಪುರ್	ರಾತ್ರಿ ತಂಗುವುದು.
4	ಗೋವರ	ರಾತ್ರಿ ತಂಗುವುದು
5	ಜಾನ್ಸಿ	ರಾತ್ರಿ ತಂಗುವುದು
6	ಬಿಂಡ	ರಾತ್ರಿ ತಂಗುವುದು
7	ಅಲಿಘರ್	ರಾತ್ರಿ ತಂಗುವುದು
8	ಘಜ್ಜಿಯಬಾದ್	ರಾತ್ರಿ ತಂಗುವುದು

ರಾಜಕೀಯ ಸಮಾವೇಶಗಳು

ತುಮಕೂರು ಜಿಲ್ಲೆ

ದೇಶದ ಪ್ರಧಾನಿ ರಾಜೀವ್‌ಗಾಂಧಿಯವರಿಗೆರಾಜಕೀಯ ಆರ್ಥಿಕ, ಹಾಗೂ ಹೋರಾಟಗಳ ಯಾವುದೇ ಹಿನ್ನಲೆ ಇಲ್ಲದಿರುವುದರಿಂದ ಇಂತಹ ಪ್ರಧಾನಿಯಿಂದ ದೇಶದ ಅಭಿವೃದ್ಧಿ ಸಾಧ್ಯವಿಲ್ಲವೆಂದು ಪಕ್ಷದ ರಾಜ್ಯ ಸೆಕ್ರಟಾರಿಯೇಟ್‌ಸದಸ್ಯರಾದ ಕಾ||ಎಸ್.ಸೂರ್ಯನಾರಾಯಣರಾವ್ ಆರೋಪಿಸಿದರು.

ನವಂಬರ್ 1 ರಂದು ತುಮಕೂರಿನ ಟೌನ್‌ಹಾಲ್‌ನಲ್ಲಿ ಜರುಗಿದ ಜಿಲ್ಲಾ ರಾಜಕೀಯ ಸಮಾವೇಶವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು. ಹಲವಾರು ಭ್ರಷ್ಟಾಚಾರದ ಪ್ರಕರಣದಲ್ಲಿ ದೇಶದ ಜನತೆಯ ಕೋಟ್ಯಾಂತರ ಹಣವನ್ನು ವಂಚಿಸಿ, ಎಲ್ಲಾ ಕ್ಷೇತ್ರದಲ್ಲಿಯೂ ವಿಫಲವಾಗಿರುವ ರಾಜೀವಗಾಂಧಿಯವರಿಗೆ ಅಧಿಕಾರದಲ್ಲಿ ಮುಂದುವರೆಯುವ ಯಾವುದೇ ನೈತಿಕ ಹಕ್ಕುಇಲ್ಲವೆಂದು ಹೇಳಿದರು. ಮುಖ್ಯ ಅತಿಥಿಗಳಾಗಿ ಮಾತನಾಡಿದ ಕಾ||ಎನ್.ಕೆ.ಉಪಾಧ್ಯಾಯರು ವಿ.ಪಿ.ಸಿಂಗ್ ಪ್ರಧಾನಿಯವರ ಭ್ರಷ್ಟಾಚಾರವನ್ನು ಬಯಲಿಗೆಳೆದರೆಂದು ವಜಾ ಮಾಡಲಾಗಿದೆ. ಮೂರು ರಾಜ್ಯಗಳಲ್ಲಿ ಎಡ–ಪ್ರಜಾಸತ್ತಾತ್ಮಕ ಪಕ್ಷಗಳು ಯಶಸ್ವಿಯಾಗಿ ಸರ್ಕಾರ ನಡೆಸಿಕೊಂಡು ಬರುತ್ತಿವೆ. ಇಂತಹ ಪಕ್ಷಗಳು ಹಾಗೂ ಜಾತ್ಯಾತೀತ ಪಕ್ಷಗಳ ಬದಲಿ ಧೋರಣೆಯ ಮೂಲಕವೇ ಕಾಂಗ್ರೆಗೆ ಪರ್ಯಾಯವುಮೂಡಿಬರಬೇಕೆಂದು ಕರೆ ನೀಡಿದರು.

ಜಿಲ್ಲೆಯ ವಿವಿಧಭಾಗಗಳಿಂದ ಬಂದ ನೂರಾರು ಮಂದಿ ರೈತ–ಕಾರ್ಮಿಕ, ವಿದ್ಯಾರ್ಥಿ-ಯುವಜನರು ಭಾಗವಹಿಸಿದ್ದ ಸಮಾವೇಶವನ್ನು ಮೊದಲಿಗೆ ರೈತ ಸಂಘದ ಅಧ್ಯಕ್ಷ ಕಾ.ಗೋವಿಂದರಾಜು ಸ್ವಾಗತಿಸಿ ಪಕ್ಷದ ರಾಜ್ಯಸಮಿತಿ ಸದಸ್ಯ ಕಾ.ಕೆ.ಆರ್.ನಾಯಕ್ ಅಧ್ಯಕ್ಷತೆ ವಹಿಸಿದ್ದರು. ರಾಜ್ಯ ಸಮಿತಿ ಸದಸ್ಯ ಕಾ. ಮಹಮ್ಮದ್‌ದಸ್ತಗೀರ್, ಬಿ.ಡಿ.ರಾಮಯ್ಯ ಶ್ರೀನಿವಾಸ್ ಮುಂತಾದವರು ಮಾತನಾಡಿದರುಕಾ.ಎಚ್.ಸಿ.ಚನ್ನಪ್ಪ ನಿರ್ಣಯ ಮಂಡಿಸಿದರು. ಜಿಲ್ಲೆಯಾದ್ಯಂತ ಪ್ರಚಾರಕಾರ್ಯ ಕೈಗೊಳ್ಳಲು ದೆಹಲಿ ರ್‍ಯಾಲಿಗೆ ನೂರಾರು ಮಂದಿ ಭಾಗವಹಿಸಲು ತೀರ್ಮಾನಿಸಲಾಯಿತು. ಕಾ.ಅಂಜಪ್ಪನವರ ವಂದನಾರ್ಪಣೆಯೊಂದಿಗೆ ಸಮಾವೇಶ ಮುಕ್ತಾಯ ಗೊಂಡಿತು.

ಕೊಡಗು ಜಿಲ್ಲೆ

ಅಕ್ಟೋಬರ್ 26 ರಂದು ವಿರಾಜಪೇಟೆಯ ನಗರ ಸಭಾ ಮಂಟಪದಲ್ಲಿ ಕಾ. ವೀರಸ್ವಾಮಿಯವರ ಅಧ್ಯಕ್ಷತೆಯಲ್ಲಿ ಕೊಡಗು ಜಿಲ್ಲಾ ರಾಜಕೀಯ ಸಮಾವೇಶ ಜರುಗಿತು. ಪಕ್ಷದ ರಾಜ್ಯ ಸೆಕ್ರಟಾರಿಯೇಟ್ ಸದಸ್ಯರಾದ ಕಾ.ಸಿ. ನಂಜುಂಡಪ್ಪ, ರಾಜ್ಯ ಕಾರ್ಯದರ್ಶಿ ಕಾ.ಪಿ. ರಾಮಚಂದ್ರರಾವ್ ರಾಜ್ಯ ಸಮಿತಿ ಸದಸ್ಯ ಕಾ.ಪಿ.ಕೆ. ಸುಬ್ರಮಣಿಯವರು ಸಮಾವೇಶವನ್ನುದ್ದೇಶಿಸಿ ಮಾತನಾಡಿದರು. ರಾಜೀವ್ ಗಾಂಧಿ ಆಳ್ವಿಕೆಯಲ್ಲಿ ದೇಶದ ರಾಜಕೀಯ ಆರ್ಥಿಕ ಬಿಕ್ಕಟ್ಟು ತೀವ್ರವಾಗಿದ್ದು ಎಲ್ಲಾ ಕ್ಷೇತ್ರದಲೂ ವಿಫಲವಾಗಿರುವ ರಾಜೀವ್‌ಗಾಂಧಿ ರಾಜೀನಾಮೆ ನೀಡಿ ಮಧ್ಯಂತರ ಚುನಾವಣೆಯನ್ನು ನಡೆಸಬೇಕೆಂದು ಒತ್ತಾಯಿಸಿದರು. ●

ದಕ್ಷಿಣ ಭಾರತ ಜಾಥ-2

	ನವಂಬರ್	
9	ರಂದು ಕನ್ಯಾಕುಮಾರಿ	5ಗಂಟೆಗೆ ಬಿಡುವುದು
	ನಾಗರ್ ಕೋಯಿಲ್	ರಾತ್ರಿ ತಂಗುವುದು
10	ತಿರುನೆಲ್‌ವೇಲಿ	ಊಟ
	ಟುಟ್ಟಿಕೊರಿನ್	ರಾತ್ರಿ ತಂಗುವುದು
11	ಕಾವಲ್ ಪಟ್ಟಿ	ಊಟ
	ರಾಜಪಾಳ್ಯಂ	ರಾತ್ರಿ ತಂಗುವುದು
12	ವಿರುದಾನಗರ್	ಊಟ
	ಮಧುರೈ	ರಾತ್ರಿ ತಂಗುವುದು
13	ದಿಂಡಿಕಲ್	ಊಟ
	ತಿರುಚ್ಚಿ	ರಾತ್ರಿ ತಂಗುವುದು
14	ತಂಜಾವೂರು	ಊಟ
	ಮಣ್ಣಾರ್‌ಗುಡಿ	ರಾತ್ರಿ ತಂಗುವುದು
15	ನಾಗಪಟ್ಟಣಂ	ಊಟ
	ತಿರುವರೂರ್	ರಾತ್ರಿ ತಂಗುವುದು
16	ಮಾಯಾವರಂ	ಊಟ
	ಚಿದಂಬರಂ	ರಾತ್ರಿ ತಂಗುವುದು
17	ಕುದಲೂರು	ಊಟ
	ಪಾಂಡಿಚೇರಿ	ರಾತ್ರಿ ತಂಗುವುದು
18	ಚಗಲ್ ಪೇಟೆ	ಊಟ
	ಮದ್ರಾಸ್	ರಾತ್ರಿ ತಂಗುವುದು
	ಆಂಧ್ರ ಪ್ರವೇಶ	
19	ತಿರುಪತಿ	ಊಟ
	ನೆಲ್ಲೂರು	ರಾತ್ರಿ ತಂಗುವುದು
20	ಅಂಗೋಲೆ	ರಾತ್ರಿ ತಂಗುವುದು
21	ಗುಂಟೂರು	ರಾತ್ರಿ ತಂಗುವುದು
22	ಎಲ್ಲೂರು	ರಾತ್ರಿ ತಂಗುವುದು
23	ವಿಜಯವಾಡ	ರಾತ್ರಿ ತಂಗುವುದು
24	ಕಮ್ಮಮ್‌ಂ	ರಾತ್ರಿ ತಂಗುವುದು
25	ವಾರಂಗಲ್	ರಾತ್ರಿ ತಂಗುವುದು
26	ಕರಿಂರ್‌ನಗರ್	ರಾತ್ರಿ ತಂಗುವುದು
27	ಬಾಲಂಪಲ್ಲಿ	ಊಟ
	ಮಧ್ಯ ಪ್ರದೇಶ ಪ್ರವೇಶ	
27	ಚಂದ್ರಾಪುರ	ರಾತ್ರಿ ತಂಗುವುದು
28	ನಾಗಪುರ	ರಾತ್ರಿ ತಂಗುವುದು
29	ಗೊಂದಿಯ	ರಾತ್ರಿ ತಂಗುವುದು
30	ದೋರಿ	ಊಟ
	ಮಹಾರಾಷ್ಟ್ರ ಪ್ರವೇಶ	
	ರಾಜನಂದಗೋನ್	ರಾತ್ರಿ ತಂಗುವುದು
	ಡಿಸೆಂಬರ್	
1	ದುರ್ಗಬಿಲ್ಲೈ	ಊಟ
	ರಾಜ್‌ಪುರ್	ರಾತ್ರಿ ತಂಗುವುದು
2	ಬಿಲಾಸ್‌ಪುರ್	ಊಟ
3	ಅಂಬಿಕಾಪುರ್	ರಾತ್ರಿ ತಂಗುವುದು
4	ಷಾದೋಲ್	ರಾತ್ರಿ ತಂಗುವುದು
5	ಬಂಡಾ	ರಾತ್ರಿ ತಂಗುವುದು
6	ಇಟವಾ	ರಾತ್ರಿ ತಂಗುವುದು
7	ಆಗ್ರ	ರಾತ್ರಿ ತಂಗುವುದು
8	ಫುಜ್ಜಿಯಬಾದ್	ರಾತ್ರಿ ತಂಗುವುದು

ವಿಶ್ವಶಾಂತಿ ದಿನಾಚರಣೆ

ಅಕ್ಟೋಬರ್ 24 ರಂದು ಗುಲ್ಬ ರ್ಗಾದ ಎಂ.ಎಸ್.ಕೆ.ಮಿಲ್ಸ್‌ನಕಾರ್ಮಿಕರು ಸಿ.ಐ.ಟಿ.ಯು. ಕರೆಯಂತೆ ಯುದ್ಧ ವಿರೋಧಿ ವಿಶ್ವಶಾಂತಿ ದಿನಾಚರಣೆಯನ್ನು ಆಚರಿಸಿದರು. ಕಾರ್ಖಾನೆಯಲ್ಲಿ ದುಡಿಯುತ್ತಿದ್ದ ಕಾರ್ಮಿಕರು 3 ಗಂಟೆಗೆ ಕೆಲಸ ಸ್ತಬ್ಧಗೊಳಿಸಿ ಮೌನ ಆಚರಣೆ ಮಾಡಿದರು. ಕಾರ್ಖಾನೆ ಎದುರು ನೆರೆದ ಕಾರ್ಮಿಕರು ಪರಮಾಣು ಯುದ್ಧ ವಿರೋಧಿ ಘೋಷಣೆಯನ್ನು ಕೂಗಿ ಪ್ರತಿಭಟನಾಪ್ರದರ್ಶನ ನಡೆಸಲಾಯಿತ್ತೆಂದು ಎಂ.ಕೆ.ಎಸ್. ಮಿಲ್ಸ್‌ನ ಕಾರ್ಮಿಕ ಸಂಘದ ಪ್ರಧಾನ ಕಾರ್ಯದರ್ಶಿ ಕಾ||ಅಬ್ದುಲ್ ಖಾದರ್ ಹನ್ನೂಭಾಯಿ ತಿಳಿಸಿದ್ದಾರೆ. ನಂತರ ನಡೆದ ಸಭೆಯನ್ನುದ್ದೇಶಿಸಿ ಕಾರ್ಮಿಕ ಮುಖಂಡರು ಮಾತನಾಡಿ ಭಾರತದ ದುಡಿಯುವ ಕಾರ್ಮಿಕ ವರ್ಗ ಅಣು ಯುದ್ಧದ ಅಪಾಯದಿಂದ ಇಡೀ ಮಾನವ ಜನಾಂಗವನ್ನು ಕಾಪಾಡಲು ಅಮೇರಿಕನ್ ಸಾಮ್ರಾಜ್ಯಶಾಹಿ ಯುದ್ಧ ಕೋರ ನೀತಿಯ ವಿರುದ್ಧ ವಿಶ್ವಶಾಂತಿ ಕಾಪಾಡಲು ದುಡಿಯಲು ಕರೆ ನೀಡಿದರು.

ಕಾ|| ಇ. ಎಂ. ಎಸ್ ರೊಡನೆ ಪ್ರಶ್ನೋತ್ತರ

ಕೇರಳದಲ್ಲಿ ಭೂ ಸುಧಾರಣೆಯ ಯಶಸ್ಸು

ಪ್ರಶ್ನೆ

ಇತ್ತೀಚೆಗೆ ನಡೆದ ಒಂದು ವಿಚಾರ ಸಂಕಿರಣದಲ್ಲಿ ಅರ್ಥಶಾಸ್ತ್ರಜ್ಞರೊಬ್ಬರು ಮಂಡಿಸಿದ ಪ್ರಬಂಧದಲ್ಲಿ ಹೀಗೆ ಹೇಳಿದರು:

1) ಕೇರಳದಲ್ಲಿ ಭೂಸುಧಾರಣೆಯ ಲಾಭದಕ್ಕಿದ್ದು ಮುಖ್ಯವಾಗಿ ರೈತನಿಗೇ ಹೊರತು ಕೃಷಿ ಕಾರ್ಮಿಕನಿಗಲ್ಲ. ಉಳುವವನಿಗೇ ಭೂಮಿ ಎಂಬ ಘೋಷಣೆ ರೈತರಿಗೇ ಭೂಮಿ ಎಂದು ಅರ್ಥವಾಯಿತು.

2) ಕೃಷಿ ರಂಗದ ಬಿಕ್ಕಟ್ಟಿಗೆ ಮುಖ್ಯವಾದ ಕಾರಣ ಅಪೂರ್ಣವಾದ ಭೂಸುಧಾರಣೆ. ಇದಕ್ಕೆ ಪರಿಹಾರ ಕೃಷಿ ಭೂಮಿಯನ್ನು ಕೃಷಿ ಕಾರ್ಮಿಕನಿಗೆ ಕೊಡುವುದು ಇದರ ಬಗ್ಗೆ ಪಕ್ಷದ ಅಭಿಪ್ರಾಯವೇನು ದಯವಿಟ್ಟು ತಿಳಿಸಿ.

ಉತ್ತರ

ಈ ಪ್ರಶ್ನೆಯಲ್ಲಿ ಹೇಳಿದ ಅಭಿಪ್ರಾಯಗಳು ಯಾರದ್ದೇ ಆಗಲಿ ಅವರಂತೂ ಅರ್ಥಶಾಸ್ತ್ರಜ್ಞರೆಂಬ ಹೆಸರಿಗೆ ಯೋಗ್ಯರಲ್ಲ. ಏಕೆಂದರೆ ಕೃಷಿ ಪ್ರಶ್ನೆಗೆ ಸಂಬಂಧಿಸಿ ಭಾರತವೂ ಸೇರಿದಂತೆ ಅಭಿವೃದ್ಧಿ ಶೀಲ ದೇಶಗಳ ವಿಶೇಷ ಪರಿಸ್ಥಿತಿಗಳ ಬಗ್ಗೆ ತಿಳಿದಿರುವ ಯಾವನಾದರೊಬ್ಬ ಅರ್ಥಶಾಸ್ತ್ರಜ್ಞ "ಕೃಷಿ ಭೂಮಿ ರೈತನಿಗೆ" ಎಂಬ ಘೋಷಣೆಯನ್ನು ತಪ್ಪೆಂದುಹೇಳಲು ಸಾಧ್ಯವಿಲ್ಲ.

18ನೇ 19ನೇ ಶತಮಾನಗಳಲ್ಲಿ ವಿವಿಧ ಯುರೋಪಿನ ದೇಶಗಳಲ್ಲಿ ನಡೆದ ಬಂಡವಾಳಶಾಹಿ ಕ್ರಾಂತಿ, 20ನೇ ಶತಮಾನದಲ್ಲಿ ರಷ್ಯಾದಿಂದ ಆರಂಭವಾಗಿ ಹಲನೆಡೆಗಳಿಗೆ ಹಬ್ಬಿದ ಸಮಾಜವಾದಿ ಕ್ರಾಂತಿ, ಈ ಸಮಾಜವಾದಿ ಕ್ರಾಂತಿಗಳಿಗೆ ಸಮಾನಾಂತರವಾಗಿ ಏಷ್ಯಾ ಖಂಡವೂ ಸೇರಿದಂತೆ ಅನೇಕ ದೇಶಗಳಲ್ಲಿ ನಡೆದ ವಿಮೋಚನಾ ಹೋರಾಟಗಳೆಲ್ಲಕ್ಕೂ ಕೇಂದ್ರ ಬಿಂದು ಕಾರ್ಷಿಕ ಕ್ರಾಂತಿಯೇ. ಅಂದಿನಿಂದ "ಕೃಷಿ ಭೂಮಿ ರೈತನಿಗೇ" ಎಂಬ ಘೋಷಣೆ ಜಾರಿಗೆ ಬರುವಂತಾಗಿದೆ.

ಚರಿತ್ರೆಯ ದೃಷ್ಟಿಯಿಂದ ನೋಡಿದರೆ ಯುರೋಪಿನಲ್ಲಾಗಲೀ ಏಷ್ಯಾದಲ್ಲಾಗಲೀ ಬಂಡವಾಳಶಾಹಿ ಪ್ರಜಾಪ್ರಭುತ್ವ ಕ್ರಾಂತಿಗಳು ಕಾರ್ಷಿಕ ಕ್ರಾಂತಿಗೇ ಸೇರಿದವಾಗಿದೆ. ಯುರೋಪಿನ "ಪಾಳೆಯಗಾರಿಪದ್ಧತಿ" ಹಾಗೂ ಅದರ ಏಷ್ಯನ್ ರೂಪಗಳು ನಾಶವಾಗುವುದು ಬಂಡವಾಳಶಾಹಿಯ ಬೆಳವಣಿಗೆಗೆ ಅತ್ಯಾವಶ್ಯಕವಾದದ್ದು, ಅದಕ್ಕಾಗಿಯೇ 18ನೇ ಶತಮಾನದಲ್ಲಿ ಫ್ರೆಂಚ್ ಕ್ರಾಂತಿಯಿಂದ ಆರಂಭವಾಗಿ 20ನೇ ಶತಮಾನದ ಉತ್ತರಾರ್ಧದಲ್ಲಿ ಚೈನಾ, ವಿಯಟ್ನಾಂ, ಕೋರಿಯಾಗಳೂ ಸೇರಿ ಹಲವಾರು ಏಷ್ಯಾನ್ ರಾಷ್ಟ್ರಗಳಲ್ಲಿ ದೊಡ್ಡ ಭೂಸ್ವಾಮಿಗಳ ಭೂಮಿಯನ್ನು ವಶಪಡಿಸಿಕೊಂಡು ರೈತರಿಗೆ ಹಂಚುವ ಕ್ರಮ ಕ್ರಾಂತಿಯ ಒಂದು ಭಾಗವಾಗಿಯೇ ನಡೆಯಿತು.

ಇದನ್ನು ತಾತ್ವಿಕವಾಗಿ ವಿಶ್ಲೇಷಣೆ ಮಾಡಿದ್ದು ರಷ್ಯನ್ ಕ್ರಾಂತಿಯನ್ನು ಸಂಘಟಿಸಿದ ನಾಯಕ ಲೆನಿನ್. ದೊಡ್ಡ ಸ್ವಾಭೂಮಿಗಳ ಸ್ವತ್ತುಗಳನ್ನುರೈತರಿಗೆ ಹಂಚುವ ಕರ್ತವ್ಯ ಬಂಡವಾಳಶಾಹಿ ಕ್ರಾಂತಿಯ ಒಂದು ಭಾಗ. ಕಾರ್ಮಿಕರ ನೇತೃತ್ವದಲ್ಲಿ ಕೃಷಿ ಜನ ಸಮುದಾಯ ದೊಡನೆಹೋರಾಟದಸಖ್ಯತೆಬೆಳೆಸಿಬಂಡವಾಳಶಾಹಿ ಪ್ರಜಾಪ್ರಭುತ್ವ ಕ್ರಾಂತಿ ಪೂರ್ಣಗೊಳಿಸುವ ಕೆಲಸವನ್ನು ಮಾತ್ರವೇ ಕಾರ್ಮಿಕವರ್ಗ ಮಾಡಿದ್ದು. ಎರಡನೇಹೆಜ್ಜೆಯಲ್ಲಿ ಸಮಾಜವಾದಿ ಸಮಾಜ ಕಟ್ಟುವ ದಾರಿಯಲ್ಲಿ ಕೃಷಿ ಸಾಮಾನ್ಯರ ಪೂರ್ಣ ಸಹಕಾರ ಪಡೆದು ಒಟ್ಟಾಗಿ ಬೇಸಾಯ ಮಾಡುವ ಕ್ರಮವನ್ನು ಏರ್ಪಡಿಸುತ್ತದೆ ಕಾರ್ಮಿಕವರ್ಗ ಇದರಿಂದಬೆಳೆಯುವ ಕೃಷಿಸಾಮೂಹಿಕ ಸಹಕಾರ ಚಳುವಳಿಯೇ ಸಮಾಜವಾದಿ ಕೃಷಿಗೆ ಮೊದಲನೆ ಹೆಜ್ಜೆ. ಲೆನಿನ್ ರವರೇ ಕಾರ್ಷಿಕ ಪ್ರಶ್ನೆಯ ಈ ಹೆಜ್ಜೆಗಳನ್ನು ವಿವರಿಸಿ ಇಡೀ ಜಗತ್ತಿನ ಚಳುವಳಿಗೆ ಮಾರ್ಗ ದರ್ಶನ ಮಾಡಿದರು.

ಈ ಆಧಾರದ ಮೇಲೆಯೇ ಸೋವಿಯೆತ್ ಒಕ್ಕೂಟದಲ್ಲಿಯೂ ನಂತರ ಇತರ ಸಮಾಜವಾದಿ ದೇಶಗಳಲ್ಲಿಯೂ ಕೃಷಿ ಕ್ರಾಂತಿಯ ಚಳುವಳಿ ಮುಂದೆ ಸಾಗಿತು. ಇಲ್ಲೆಲ್ಲೂ ಪ್ರಶ್ನೆಯಲ್ಲಿ ಬಂದ ಅರ್ಥಶಾಸ್ತ್ರಜ್ಞನ ಅಭಿಪ್ರಾಯದಂತೆ ಕೃಷಿ ಕಾರ್ಮಿಕನಿಗೆ ಭೂಮಿಯನ್ನು ನೀಡಲಿಲ್ಲ.

"ಕೃಷಿ ಭೂಮಿ ರೈತನಿಗೆ" ಎಂಬ ಘೋಷಣೆಯ ಅರ್ಥವೇನು ? ಈ ಘೋಷಣೆಯ ಲಾಭ ರೈತನಿಗೆ ಹೊರತು ಕೂಲಿಕಾರನಿಗಲ್ಲ ನಿಜ. ಆದರೆ ದೊಡ್ಡ ಭೂ ಒಡೆಯರ ಭೂಮಿಯನ್ನು ವಶಪಡಿಸಿಕೊಂಡು ಹಂಚುವಾಗ ಗ್ರಾಮಾಂತರ ಪ್ರದೇಶದ ರೈತರಿಗೂ ಅವರ ಜೊತೆಗೆ ಕೃಷಿ ಕೂಲಿಗಾರರಿಗೂ ಭೂಮಿ ಸಿಗುತ್ತದೆ. ಹೀಗೆ ಭೂಒಡೆಯರ ಭೂಮಿಯನ್ನು ಗೇಣಿಗೆ ಮತ್ತಿತರ ಹಲವಾರು ರೀತಿಯಲ್ಲಿ (ಬಡ್ಡಿ ಸಾಲ ಇತ್ಯಾದಿ) ಕೃಷಿ ಮಾಡಿ ತಮ್ಮ ದುಡಿಮೆಯ ಫಲವನ್ನು ಭೂಮಾಲೀಕರಿಗೊಪ್ಪಿಸುತ್ತಿರುವ ರೈತರನ್ನು ಹಾಗೆಯೇ ಅವರ ಭೂಮಾಲೀಕರ ಭೂಮಿಗಳಲ್ಲಿ ದುಡಿಯುತ್ತಿರುವ ಕೃಷಿಕಾರ್ಮಿಕರನ್ನು ಒಟ್ಟುಗೂಡಿಸಿ ಐಕ್ಯತೆಯನ್ನು ಕಟ್ಟಿ ಭೂಮಾಲೀಕರನ್ನು ಮೂಲೆ ಗುಂಪು ಮಾಡುವುದು ಎಂದರ್ಥ.

ಅಂದರೆ ಕಾರ್ಷಿಕ ಕ್ರಾಂತಿಯಿಂದ ಕೃಷಿ ಕೂಲಿಕಾರರಿಗೂ, ಸಣ್ಣ ರೈತರಿಗೂ, ಮಧ್ಯಮ ರೈತರಿಗೂ ಲಾಭವಾಗುವುದು ಎಂದರ್ಥ. ಭೂಹೀನ ಕೃಷಿ ಕಾರ್ಮಿಕರಿಗೆ ಒಂದು ತುಂಡು ಭೂಮಿ ಸಿಗುವಾಗ ಬಡ ರೈತನಿಗೆ ಈಗ ಅವನ ಬಳಿ ಇರುವುದಕ್ಕಿಂತ ಸ್ವಲ್ಪ ಹೆಚ್ಚು ಭೂಮಿ ಸಿಗುವುದು. ಮಧ್ಯಮವರ್ಗದ ರೈತನಿಗೆ ಕಾರ್ಷಿಕ ಕ್ರಾಂತಿಯ ಫಲವಾಗಿ ಜೀವನ ಮಟ್ಟ ಹಲವಾರು ರೀತಿಯಲ್ಲಿ ಉತ್ತಮಗೊಳ್ಳಲು ಅನಶ್ಯವಾದ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಶ್ರೀಮಂತ ರೈತ ಮಾತ್ರ ಭೂ ಹಂಚಿಕೆಯ ಪ್ರಕ್ರಿಯೆಯಿಂದ ದೂರವಾಗಿರುತ್ತಾನೆ.

ಲೆನಿನ್ ಭೂಹಂಚಿಕೆಯ ಸಮಸ್ಯೆಯನ್ನು ಪರಿಹರಿಸುವುದು ಹೇಗೆ ಎಂಬ ವಾಸ್ತವಿಕ ಸಮಸ್ಯೆಯನ್ನೆದುರಿಸುತ್ತಾ ಈ ಪರಿಹಾರವನ್ನು ರೂಪಿಸಿದರು. ಆದರೆ ಎಂಗೆಲ್ಸ್‌ರವರು ಭೂಮಿ ಹಂಚಿಕೆಯ ಸಮಸ್ಯೆ ತಕ್ಷಣಪರಿಹರಿಸಬೇಕಾದ ಒಂದು ವಾಸ್ತವಿಕ ಸಮಸ್ಯೆಯಾಗಿ, ಪರಿಣಮಿಸುವ ಮೊದಲೇ ಭೂವಿತರಣೆ ಹಾಗೂ ಕಾರ್ಷಿಕ ಕ್ರಾಂತಿಯ ಮೂಲಕ ಸಮಾಜವಾದದ ಕಡೆಗೆ ಮುಂದೆ ಸಾಗುವ ಹಾದಿಯನ್ನು ತಾತ್ವಿಕವಾಗಿ ರೂಪಿಸಿದ್ದರು. ಎಂಗೆಲ್ಸ್‌ರವರು ವ್ಯಕ್ತ ಪಡಿಸಿದ ಅಭಿಪ್ರಾಯವನ್ನು ಗಣನೆಗೆ ತೆಗೆದುಕೊಂಡೆ ಕಾರ್ಷಿಕ ಕ್ರಾಂತಿಯ ಪ್ರಶ್ನೆಗೆ ಸಮಗ್ರ ಪರಿಹಾರ ಕಂಡುಹಿಡಿಯಲು ಪ್ರಯತ್ನಿಸಿದರು.

ಎಂಗೆಲ್ಸ್, ಲೆನಿನ್ ಇಬ್ಬರು ರೂಪಿಸಿದ ಪರಿಹಾರ; ರೈತರು–ಕೃಷಿ ಕೂಲಿಕಾರರೂ ಸೇರಿದಂತೆಎಲ್ಲಾ ಗ್ರಾಮೀಣ ಜನ ಸಮುದಾಯವು ಸೇರಿ ಐಕ್ಯತೆಯಿಂದ ಬಂಡವಾಳಶಾಹಿ ಪ್ರಜಾಪ್ರಭುತ್ವ ಕ್ರಾಂತಿಯನ್ನು ಪೂರ್ತಿಗೊಳಿಸಿ ಸಮಾಜವಾದಿ ಕ್ರಾಂತಿಯ ಕಡೆಗೆ ಮುಂದೆ ಸಾಗಬೇಕು ಎಂದು.

ತಾತ್ವಿಕವಾಗಿ ಹಾಗೂ ಪ್ರಾಯೋಗಿಕವಾಗಿ ಎರಡು ಶತಮಾನಗಳ ಕಾಲ ವಿಶ್ವದ ಇತಿಹಾಸವನ್ನೇ ಬದಲಾಯಿಸಿದ ಈ ಸತ್ಯವನ್ನು ನಿರಾಕರಿಸುವುದೇ ಈ ಪ್ರಶ್ನೆಯಲ್ಲಿ ಹೇಳಲ್ಪಟ್ಟಿರುವ ಅರ್ಥಶಾಸ್ತ್ರಜ್ಞನ ಕೆಲಸ. ಭಾರತವೂ ಸೇರಿದಂತೆ ಹಿಂದುಳಿದ ದೇಶಗಳಲ್ಲಿ ಇನ್ನೂ ಬಲವಾಗಿರುವ ಪಾಳೆಯಗಾರಿ ಹಾಗೂ ಅತಿವೇಗವಾಗಿ ಬೆಳೆಯುತ್ತಿರುವ ಬಂಡವಾಳಶಾಹಿಗಳಿಗೆ ಎದುರಾಗಿ ಕೃಷಿ ಜನಸಾಮಾನ್ಯರು ಅಂದರೆ ರೈತರು ಹಾಗೂ ಕೃಷಿ ಕಾರ್ಮಿಕರು ಒಟ್ಟಾಗಿ ಸೇರಿ ಎಂದರ್ಥ–ಐಕ್ಯತೆಯಿಂದ ಹೋರಾಡ ಬೇಕು ಎನ್ನುವ ಮಾರ್ಕ್ಸ್‌ವಾದಿ–ಲೆನಿನ್‌ವಾದಿ ತಿಳುವಳಿಕೆಗೆ ವಿರುದ್ಧವಾಗಿ ರೈತರು ಮತ್ತು ಕೃಷಿ ಕಾರ್ಮಿಕರನ್ನು ಒಬ್ಬರ ವಿರುದ್ಧ ಒಬ್ಬರನ್ನು ಎತ್ತಿ ಕಟ್ಟುವ ತಂತ್ರ ಅರ್ಥಶಾಸ್ತ್ರಜ್ಞನ ಮಾತಿನಲ್ಲಿ ಅಡಗಿದೆ. ಈ ಮಾತನ್ನು ಹೇಳುವವರ ಉದ್ದೇಶ ಏನಾಗಿದ್ದರೂ ಅದರ ಫಲ ಮಾತ್ರ ಗ್ರಾಮೀಣ ಜನಸಮುದಾಯದ ಎರಡು ವಿಭಾಗಗಳ ನಡುವೆ ಕಿತ್ತಾಟ ಹಚ್ಚಿ ಬಂಡವಾಳಶಾಹಿ ಭೂಮಾಲಕರ ಪ್ರಭುತ್ವವನ್ನು ದೃಢಗೊಳಿಸುವುದರಲ್ಲಿ ಕೊನೆಗೊಳ್ಳುತ್ತದೆ.

ಯಶಸ್ವೀ ಮೂರನೇ ಡಿವೈಎಫ್ಐ ರಾಜ್ಯ ಸಮ್ಮೇಳನ

ಮೂರನೇ ರಾಜ್ಯ ಸಮ್ಮೇಳನವು ನವೆಂಬರ್ 4ರಿಂದ 6ರವರೆಗೆ ಕಾಂ. ಗುರುನಾಮ್‌ಸಿಂಗ್ ಉಪ್ಪಲ್ ನಗರ ಕೋಲಾರದಲ್ಲಿ ವಿಜೃಂಭಣೆಯಿಂದ ನೆರವೇರಿತು.

ರಾಜ್ಯ ಸಮಿತಿಯ ಅಧ್ಯಕ್ಷರಾದ ಕಾಂ.ಮಹಾಬಲ ವಡೇರ ಹೋಬ್ಳಿ ಅವರು ಧ್ವಜಾರೋಹಣ ಮಾಡಿದರು. ರಾಷ್ಟ್ರದ ಸಮಗ್ರತೆ ಐಕ್ಯತೆಗಾಗಿಯೂ ಮತ್ತು ವಿಶ್ವಶಾಂತಿಯ ಹೋರಾಟದಲ್ಲಿಯೂ ಹೋರಾಡಿ ಮಡಿದ ನಾಯಕರುಗಳಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು.

ಕಾಂ. ಮಹಾಬಲ ವಡೇರ ಹೋಬ್ಳಿ ಜಂಬಯ್ಯ ನಾಯಕ ಮತ್ತು ಸ್ಟ್ಯಾನ್ಲಿ ಇವರುಗಳನ್ನು ಅಧ್ಯಕ್ಷ ಮಂಡಲಿಗೆ ಆರಿಸಲಾಯಿತು.

ಬೆಂಗಳೂರು ವಿ.ವಿ. ಜ್ಞಾನ ಭಾರತೀಯ ಪ್ರಸಾರಾಂಗದ ನಿರ್ದೇಶಕರಾದ ಡಾ. ಮರುಳ ಸಿದ್ದಪ್ಪ ಇವರು ಸಮ್ಮೇಳನ ಉದ್ಘಾಟಿಸಿದರು. ರಾಜ್ಯ ಕಾರ್ಯದರ್ಶಿ ಅವರು ಬರೆದ ಶಾಂತಿ ಸಂದೇಶದ ನಾಡಿನಲ್ಲಿ ಎಂಬ ಪುಸ್ತಕವನ್ನು ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಕಾಂ.ಪಿ. ರಾಮಚಂದ್ರ ರಾವ್‌ರವರು ಬಿಡುಗಡೆ ಮಾಡಿದರು. ಸ್ವಾಗತ ಸಮಿತಿಯ ಅಧ್ಯಕ್ಷರಾದ ಕಾ. ಆರ್. ವೆಂಕಟರಾಮಯ್ಯ ಸ್ವಾಗತಿಸಿದರು. ಕಾರ್ಯದರ್ಶಿ ಕಾಂ.ಜಿ.ವಿ. ಶ್ರೀರಾಮರೆಡ್ಡಿ ಅವರು ವಂದನಾರ್ಪಣೆ ಮಾಡಿದರು. ಸಿ.ಐ.ಟಿ.ಯು. ಪರವಾಗಿ ಕಾಂ. ಸಿ.ನಂಜುಂಡಪ್ಪ, ಎನ್.ಕೆ. ಉಪಾಧ್ಯಾಯ ಎಸ್. ಸೂರ್ಯನಾರಾಯಣರಾವ್ ಪ್ರಾಂತ ರೈತ ಸಂಘದ ಪರವಾಗಿ ಪಿ.ಆರ್.ರಾವ್ ಕೂಲಿಕಾರರ ಸಂಘದ ಪರವಾಗಿ ಜಿ.ವಿ. ಶ್ರೀರಾಮರೆಡ್ಡಿ, ಎಸ್.ಎಫ್.ಐ. ಪರವಾಗಿ ಎಸ್.ಆರ್.ಆರಾಧ್ಯ, ಬಿ.ಇ.ಎಫ್.ಐ ಪರವಾಗಿ ಬಿ ಎಂ. ಮಾಧವ ಎ.ಐ.ಎಲ್.ಯು. ಪರವಾಗಿ ಹೆಚ್. ಎನ್. ನಾಗಮೋಹನ್ ದಾಸ್, ಮತ್ತು ಶಾಸಕರಾದ ಕಾ.ಟಿ.ಎಸ್. ಮಣಿ, ಎ.ಐ.ವೈ.ಎಫ್. ಪರವಾಗಿ ಕಾಂ.ರಾಧಾಕೃಷ್ಣ ಶುಭಕೋರಿ ಮಾತನಾಡಿದರು. ಸಮ್ಮೇಳನದ ಕೊನೆಯವರೆಗೂ ಇದ್ದು ಪ್ರಧಾನ ಕಾರ್ಯದರ್ಶಿ ಮತ್ತು ಸಹಕಾರ್ಯದರ್ಶಿಗಳಾದ ಕಾಂ. ಹನನ್ ಮುಲ್ಲಾ, ಎಂ.ಎ. ಬೇಬಿ ಅವರುಗಳು ಮಾರ್ಗದರ್ಶನ ನೀಡಿದರು.

ಪ್ರತಿನಿಧಿಗಳ ಅಧಿವೇಶನದಲ್ಲಿರಾಜ್ಯ ಕಾರ್ಯದರ್ಶಿ ಎಸ್.ಶಿವರಾಂ ಇವರು ಕರಡು ವರದಿ ಮಂಡಿಸಿ ಮಾತಾಡಿದರು. ಕೊನೆಯ ಅಧಿವೇಶನದಲ್ಲಿ ಕಾ. ಹನನ್‌ಮುಲ್ಲಾರವರು ಸುಧೀರ್ಘವಾಗಿ ಸಂಘಟನೆಯ ವಿಷಯವಾಗಿ ಮಾತನಾಡಿದರು.

ಎರಡನೇ ದಿನದ ಪ್ರಾರಂಭದಲ್ಲಿ ಕಾ. ಪಿ.ರಾಮಚಂದ್ರರಾವ್ ರವರು ವಿಜ್ಞಾನ ಮತ್ತು ವೈಜ್ಞಾನಿಕಮನೋಭಾವ ಕುರಿತು ಮಾತನಾಡಿದರು. ನಂತರ 42 ಪ್ರತಿನಿಧಿಗಳು ವಿದ್ವತ್ಪೂರ್ಣವಾಗಿ ವರದಿಯ ಮೇಲೆ ಚರ್ಚೆ ಮಾಡಿದರು. ರಾತ್ರಿ ಕೆ.ಜಿ.ಎಫ್. ಸಮುದಾಯದವರಿಂದ / ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

ಮೂರನೇಯ ದಿನದ ಅಧಿವೇಶನ ಕಾ.ಎಂ.ಎ.ಬೇಬಿ ಅವರಿಂದ ಪ್ರಾರಂಬಿಸಲ್ಪಟ್ಟಿತು. ಸ್ವಾಗತ ಸಮಿತಿಯ ಖಜಾಂಚಿ ಕಾ.ಕೆ.ಎಂ.ವೆಂಕಟೇಶ್‌ರವರು ವಂದಿಸಿದರು. ಪಂಜಾಬ್‌ನಿಧಿಗೆ ಪ್ರತಿನಿಧಿಗಳಿಂದ 624 ರೂಗಳನ್ನು ಸಂಗ್ರಹಿಸಿ ಕಾ.ಹನನ್‌ಮುಲ್ಲಾರವರಿಗೆ ಅರ್ಪಿಸಲಾಯಿತು.

ರಾಜ್ಯದ 14 ಜಿಲ್ಲೆಗಳನ್ನು ಪ್ರತಿನಿಧಿಸಿ 150 ಪ್ರತಿನಿಧಿಗಳು ವೀಕ್ಷಕರು ಭಾಗವಹಿಸಿದ್ದರು. ಅವರಲ್ಲಿ ಎಂಟು ಜನ ಮಹಿಳಾಪ್ರತಿನಿಧಿಗಳುಬಂದಿದ್ದರು ಸಂಜೆ ಸುರಿಯುವ ಮಳೆಯಲ್ಲೇ ಸುಮಾರು ಮೂರು ಸಾವಿರಕ್ಕೂ ಮಿಗಿಲಾದ ಯುವಜನರ ಬೃಹತ್‌ರ್ಯಾಲಿಯು ಕೋಲಾರದ ಮುಖ್ಯ ಬೀದಿಗಳನ್ನು ಸಂಚರಿಸಿ ಬಹಿರಂಗ ಸಭೆಯ ಮೈದಾನವನ್ನು ತಲುಪಿತು. ನೂತನ ಸಮಿತಿಯ ಪದಾಧಿಕಾರಿಗಳು ಮತ್ತು ಸದಸ್ಯರನ್ನು ರಾಜ್ಯ ಕಾರ್ಯದರ್ಶಿ ಕಾ.ಎಸ್ ಶಿವರಾಂ ಪರಿಚಯಿಸಿದರು.

ಅಧ್ಯಕ್ಷರಾದ ಕಾ.ನಾಗಮೋಹನ್ ದಾಸ್‌ರವರಅಧ್ಯಕ್ಷತೆಯಲ್ಲಿ ಕಾ.ಹನನ್ ಮುಲ್ಲಾ ಎಂ.ಎ.ಬೇಬಿ, ಎಸ್.ಸೂರ್ಯನಾರಾಯಣರಾವ್, ಜಿ.ವಿ.ಶ್ರೀರಾಮರೆಡ್ಡಿ ಇವರುಗಳು ಮಾತನಾಡಿದರು. ಕಾ.ಟಿ.ಶಂಕರ್ ವಂದಿಸಿದರು.

ವಿಶ್ವಶಾಂತಿ, ರಾಷ್ಟ್ರೀಯ ಸಮಗ್ರತೆ ರಾಜ್ಯದ ಅಭಿವೃದ್ಧಿಯ ಯೋಜನೆಗಳ ಜಾರಿಗಾಗಿ, ಸರ್ಕಾರಿ ಕಛೇರಿಗಳಲ್ಲಿ ಖಾಲಿ ಇರುವ ಎಲ್ಲಾ ಹುದ್ದೆಗಳನ್ನು ಭರ್ತಿಯಾಗಬೇಕೆಂದೂ ರಾಜೀವ್ ಸರ್ಕಾರ ರಾಜೀನಾಮೆ ನೀಡಬೇಕೆಂದೂ ಮತ್ತು 'ಸತಿ' ಪದ್ಧತಿಯನ್ನು ಖಂಡಿಸುವ ಹಾಗೂ ಮದ್ರಾಸ್‌ನ ಡಿ. 19.ರ ಬೃಹತ್ ರ್ಯಾಲಿಗೆ ಸಹಸ್ರಾರು ಯುವ ಜನರನ್ನು ಸಂಘಟಿಸಲು ನಿರ್ಣಯ ಕೈಗೊಳ್ಳಲಾಯಿತು.

'ಸತಿ ಪದ್ಧತಿ' ವಿರುದ್ಧ ಬೃಹತ್ ರ್ಯಾಲಿ

ರಾಜಸ್ತಾನ್ 'ಸತಿ' ಪದ್ಧತಿ ಖಂಡಿಸಿ ಬಳ್ಳಾರಿ ಜಿಲ್ಲೆಯ ಹೂವಿನ ಹಡಗಲಿಯಲ್ಲಿ ವಿವಿಧಸಾಮೂಹಿಕಸಂಘಟನೆಗಳ ಬೃಹತ್‌ರ್ಯಾಲಿಯೊಂದನ್ನು ಏರ್ಪಡಿಸಲಾಗಿತ್ತು. ನವಂಬರ್ 7 ರಂದು ಸತಿ ವಿರೋಧಿ ಹೋರಾಟ ಕ್ರಿಯಾ ಸಮಿತಿ ಆಶ್ರಯದಲ್ಲಿ ನಡೆದ ಮೆರವಣಿಗೆಯಲ್ಲಿ ಇಲ್ಲಿನ ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾಸಂಘಟನೆ,ಎಸ್.ಎಫ್.ಐ., ಸಮುದಾಯ, ದಲಿತ ಸಂಘರ್ಷ ಸಮಿತಿ ಹಾಗೂ ಸ್ಥಳೀಯ ಮಹಿಳಾ ಸಂಘಟನೆಯಾದ ಅಕ್ಕನ ಬಳಗದ ಕಾರ್ಯಕರ್ತರು ಭಾಗವಹಿಸಿದ್ದರು. ಬಾಲಕ ಬಾಲಕಿಯರ ಪ್ರೌಢಶಾಲೆ, ಐ.ಟಿ.ಐ. ಹಾಗೂ ಕಾಲೇಜಿನ ನೂರಾರು ಮಂದಿ ಶಾಲಾ ವಿದ್ಯಾರ್ಥಿಗಳು ಈ ಮೆರವಣಿಗೆಗೆ ಸೇರಿದರು. ಊರಿನ ಪ್ರಮುಖ ಬೀದಿಯಲ್ಲಿ ಸತಿ ಪದ್ಧತಿ ಆಚರಣೆ ವಿರುದ್ಧ ಘೋಷಣೆ ಕೂಗುತ್ತಾ ಸಾಗಿದ ರ್ಯಾಲಿಯನ್ನು ನೂರಾರು ಜನತೆ ವೀಕ್ಷಿಸಿ ತಮ್ಮ ಪ್ರತಿಕ್ರಿಯೆ ವ್ಯಕ್ತಗೊಳಿಸುತ್ತಿದ್ದರು. ತಾಲ್ಲೋಕು ಕಛೇರಿ ತಲುಪಿ ತಹಸೀಲ್ದಾರ್‌ರವರಿಗೆ ಮನವಿ ಅರ್ಪಿಸಲಾಯಿತು. ನಂತರ ನಡೆದ ಬಹಿರಂಗ ಸಭೆಯಲ್ಲಿ ಮಹಿಳಾ ಸಂಘಟನೆ ರಾಜ್ಯ ಸಂಚಾಲಕಿ ಕಾ.ಹರಿಣಿ ಕಕ್ಕೇರಿ, ರೈತ ಸಂಘದ ಪಿ.ಆರ್.ವೆಂಕಟೇಶ್ ಹೊಸಪೇಟೆ ಟೈಮ್ಸ್‌ಪತ್ರಿಕೆ ಸಹ ಸಂಪಾದಕಿ ಶ್ರೀಮತಿಅಂಬಿಕಾಜಾಲಗಾರ್,ಕ್ರಿಯಾ ಸಮಿತಿ ಅಧ್ಯಕ್ಷೆ ಶ್ರೀಮತಿಬಸವಣ್ಣೆಮ್ಮ ಮಾತನಾಡಿ ಎಲ್ಲ ರೀತಿಯ ಸ್ತ್ರೀ ಶೋಷಣೆ, ದಬ್ಬಾಳಿಕೆ, ಹಾಗೂ ಕ್ರೂರ ಸತಿ ಪದ್ಧತಿ ವಿರುದ್ಧ ದೇಶದ ಪ್ರಜ್ಞಾವಂತ ಜನರು ಪ್ರತಿಭಟಿಸಬೇಕೆಂದು ಕರೆ ನೀಡಿದರು. ಕ್ರಿಯಾಸಮಿತಿ ಕಾರ್ಯದರ್ಶಿ ಚಂದ್ರಶೇಖರಬೆನ್ನೂರು ಸಭೆ ಕಾರ್ಯ ಕಲಾಪ ನಡೆಸಿದರು. ಮಲ್ಲಯ್ಯನವರು ಸ್ವಾಗತಿಸಿ ಶೇಷಗಿರಿ ರಾವ್ ವಂದನಾರ್ಪಣೆ ಮಾಡಿದರು.

○

ಮೈಸೂರು ಮಿಲ್ಸ್ ದುಡಿಯುವ ಮಹಿಳೆಯರ ಸಭೆ

ಬೆಂಗಳೂರಿನ ಶ್ರೀರಾಮಪುರ ಸಿ.ಐ.ಟಿ.ಯು. ಕಛೇರಿಯಲ್ಲಿ ನ.11ರಂದು ಮೈಸೂರುಮಿಲ್ಸ್ ಹತ್ತಿಗಿರಣಿ ಕಾರ್ಮಿಕ ಸಂಘದ ದುಡಿಯುವ ಮಹಿಳೆಯರ ಸಭೆ ಸಿ.ಐ.ಟಿ.ಯು. ಮುಖಂಡ ಕಾ.ಪಿ ಕೆ.ಸುಬ್ರಮಣಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಯುವಜನ ಮುಖಂಡ ಶ್ರೀನಿವಾಸ್ ಸ್ವಾಗತಿಸಿದರು.ಕಾ.ಶಾಂತಕುಮಾರಿಯವರು ಸಭೆಯನ್ನುದ್ದೇಶಿಸಿ ಮಾತನಾಡಿ ಇತ್ತೀಚೆಗೆ ರಾಜಸ್ಥಾನದಲ್ಲಿ ನಡೆದ 'ಸತಿ' ಪದ್ಧತಿಯನ್ನು ಖಂಡಿಸಿದರು. ಶತಮಾನಗಳಿಂದ ಇಂತಹ ಹೇಯ ಕೃತ್ಯಗಳನ್ನು ನಡೆಸಿಕೊಂಡು ಬರುತ್ತಿರುವ ಮತಾಂಧ ಶಕ್ತಿಗಳ ವಿರುದ್ಧ ಜನರು ಮುಖ್ಯವಾಗಿ ಮಹಿಳಾಸಂಘಟನೆಗಳು ಹೋರಾಟ ನಡೆಸುವುದು ಅಗತ್ಯವಿದೆ ಎಂದು ಹೇಳಿದರು. ಕಾಂಗ್ರೆಸ್ ಆಡಳಿತದಲ್ಲಿ ದೇಶದಲ್ಲಿ ಮಹಿಳೆಯರು ಹೀನಾಯ ಪರಿಸ್ಥಿತಿ ಎದುರಿಸುವಂತೆ ಮಾಡಿರುವ ರಾಜೀವ್ ಗಾಂಧಿಆಡಳಿತ ಕೊನೆಗೊಳ್ಳಬೇಕೆಂದು ಕರೆ ನೀಡಿದರು. ನವಂಬರ್ 20 ರಂದು ಬೆಂಗಳೂರಿಗೆ ಬರುವ ಜಾಥ ಸ್ವಾಗತಿಸಲು ಹೆಚ್ಚಿನ ಮಹಿಳೆಯರು ಭಾಗವಹಿಸಬೇಕೆಂದರು. ಸಭೆಗೆ ಸುಮಾರು 50 ಮಂದಿಮಹಿಳೆಯರುಭಾಗವಹಿಸಿದ್ದರು. ಕೊನೆಯಲ್ಲಿ ಕಾ.ರೇವಣ್ಣ ವಂದಿಸಿದರು.

ದೇಶ-ವಿರೋಧಿ ರಕ್ಷಣಾ ವ್ಯವಹಾರಗಳು ರದ್ದಾಗಬೇಕು

[1ನೇ ಪುಟದಿಂದ]

ಹಾಗಾದರೆ ಏಕೆ ರಾಜೀವಗಾಂಧಿಯವರ ಈ ಸಂವಿಧಾನದ ರಿಯಾಯಿತ್ತಿಯ ನಿಲುವು? ರಕ್ಷಣಾ ಸಹಕಾರದ ಅಪಾಯಕಾರೀ ಒಪ್ಪಂದದಲ್ಲಿ ಈ ಪ್ರಶ್ನೆಗೆ ಉತ್ತರ ದೊರೆಯುತ್ತದೆ. ಮೊತ್ತ ಮೊದಲ ಬಾರಿಗೆ ಭಾರತ, ಅಮೆರಿಕಾ ರಕ್ಷಣಾ ಒಪ್ಪಂದದ ಸಂಗತಿಗಳನ್ನು ಅಧಿಕೃತವಾಗಿ ಹೇಳಲಾಗುತ್ತಿದೆ ಎಂದು ಭಾರತದ ಪತ್ರಿಕೆಗಳು ಗಮನಿಸಿವೆ. ಏನಿದು ರಕ್ಷಣಾ ಸಹಕಾರ? ಅದರ ಶರತ್ತುಗಳೇನು? ಯಾರಿಗೂ ಗೊತ್ತಿಲ್ಲ. ಗಂಭೀರ ಸನ್ನಿವೇಶಗಳಲ್ಲಿ ಶಸ್ತ್ರಾಸ್ತ್ರ ಸರಬರಾಜಿಗೆ ಅಡ್ಡಿಯುಂಟುಮಾಡಿ ದೇಶದಸಾರ್ವಭೌಮತೆಗೆ ಕುತ್ತುತರುವುದು ಖಂಡಿತ.

ಇದು ಅಮೆರಿಕಾಕ್ಕೆ ನಮ್ಮ ರಕ್ಷಣಾ ಸಾಮರ್ಥ್ಯದೊಳಗೆ ಮೂಗು ತೂರಿಸಿ ಪಾಕಿಸ್ತಾನಕ್ಕೆ ಹೆಚ್ಚೆಚ್ಚು ಉತ್ಕೃಷ್ಟ ಶಸ್ತ್ರಾಸ್ತ್ರಗಳನ್ನು ನೀಡಿ ಭಾರತವನ್ನು ದುರ್ಬಲಗೊಳಿಸುವ ಅದರ ಧೋರಣೆಗೆ ಅವಕಾಶ ನೀಡುತ್ತದೆ. ಬಹುಶ: ಅಮೆರಿಕಾದಲ್ಲಿ ಯಾವುದೋ ವ್ಯವಹಾರ ಕುದುರಿಸಿದ್ದರಿಂದ ಪ್ರಧಾನ ಮಂತ್ರಿಗಳಿಗೆ ಸಂತೋಷವಾಗಿರಬೇಕು.

ಆದರೆ ಹಾಗೆ ಕುದುರಿಸಿದ ವ್ಯವಹಾರ ದೇಶದಸಮಗ್ರತೆಗೆ, ಭದ್ರತೆಗೆ ಅಪಾಯವೊಡ್ಡುವಂತಹದು. ಪದೇ ಪದೇ ಹಲವುಭಾರಿ ವಿಶ್ವಾಸ ಘಾತ ಮಾಡಿ ತೊಂದರೆಯುಂಟು ಮಾಡಿದ ಒಂದು ಶಕ್ತಿಯೊಡನೆ ಇಂತಹವ್ಯವಹಾರ ಕುದುರಿಸುವುದು ನಮ್ಮ ಜನತೆಯ ಭದ್ರತೆಯೊಂದಿಗೆ ಚಿನ್ನಾಟವಾಡಿದಂತೆ. ಈ ಎಲ್ಲಾ ವ್ಯವಹಾರಗಳನ್ನು ರದ್ದುಪಡಿಸಬೇಕೆಂದು ಜನತೆ ಒತ್ತಾಯಿಸಬೇಕು. ಸಂಸತ್ತಿನ ಒಪ್ಪಿಗೆಯಿಲ್ಲದೆ ಈ ಯಾವ ವ್ಯವಹಾರಗಳಿಗೂ ಸಹಿಹಾಕಬಾರದು.

ಈ ರಾಷ್ಟ್ರ ವಿರೋಧಿ ರಕ್ಷಣಾ ವ್ಯವಹಾರ ರಾಜೀವಗಾಂಧಿಯವರ ಆರ್ಥಿಕ ನೀತಿಯ ಸಹಜ ಫಲ. ಇದನ್ನು ತಡೆಯದಿದ್ದರೆ ದೇಶದ ಅಲಿಪ್ತ ವಿದೇಶಾಂಗ ಧೋರಣೆಗೂ ಸಂಚಕಾರ ಬರಬಹುದು ಎಂಬುದರ ಎಚ್ಚರಿಕೆ ನೀಡುವ ಸಂಗತಿಯಿದು.

ಪಿ.ಡಿ.ಸಂಪಾದಕೀಯ
ನವಂಬರ್ 1, .987

ಆಂಧ್ರ: ಸಿ. ಐ. ಟಿ. ಯು. ಕಾರ್ಯಕರ್ತರಿಗೆ ತರಬೇತಿ ಶಿಬಿರ

ಆಂಧ್ರಪ್ರದೇಶದ ಸಿ.ಐ.ಟಿ.ಯು. ರಾಜ್ಯ ಸಮಿತಿಯುತನ್ನ ಕಾರ್ಯಕರ್ತರಿಗೆ ರಾಜಕೀಯ ತರಬೇತಿ ನೀಡುವುದರ ಕಡೆಗೆ ಹೆಚ್ಚಿನ ಗಮನ ನೀಡುತ್ತಿದೆ. ಹತ್ತು ವರ್ಷಗಳಿಂದಲೂ ಅದು ಹಲವಾರು ತರಬೇತಿ ಶಿಬಿರಗಳನ್ನು ನಡೆಸುತ್ತಾ ಬಂದಿದೆ. ಕಳೆದ ವರ್ಷ ಅದು ಎರಡು ಶಿಬಿರಗಳನ್ನು ನಡೆಸಿತು. ಒಂದು ಶಿಬಿರದಲ್ಲಿ ಬ್ಯಾಂಕ್ ನೌಕರರಿಗೂ ಮತ್ತೊಂದು ಶಿಬಿರದಲ್ಲಿ ಸಾರಿಗೆ ನೌಕರರಿಗೂ ರಾಜಕೀಯ ತರಬೇತಿ ನೀಡಲಾಯಿತು. ಇತ್ತೀಚೆಗೆ ಅಕ್ಟೋಬರ್ 2 ರಿಂದ 7ರ ವರೆಗೆ ಆರು ದಿನಗಳ ಧೀರ್ಘಕಾಲ ಮಿರಿಯಾಲಗುಂಡ ಎಂಬಲ್ಲಿ ರಾಜಕೀಯ ತರಬೇತಿ ಶಾಲೆಯನ್ನು ರಾಜ್ಯದ ಸಿ.ಐ.ಟಿ.ಯು. ವ್ಯವಸ್ಥೆಗೊಳಿಸಿತು. ರಾಜ್ಯದ 18 ಜಿಲ್ಲೆಗಳಿಂದ ಒಟ್ಟು 342 ಕಾರ್ಯಕರ್ತರು ತರಬೇತಿ ಶಾಲೆಯಲ್ಲಿ ಭಾಗವಹಿಸಿದ್ದರು. ಭಾಗವಹಿಸಿದವರಲ್ಲಿ 308 ವಿದ್ಯಾರ್ಥಿಗಳು 40 ವರ್ಷಕ್ಕಿಂತ ಕಡಿಮೆ ವಯಸ್ಸಿನವರಾಗಿದ್ದು, 192 ವಿದ್ಯಾರ್ಥಿಗಳು ಕಾಲೇಜು, ಶಿಕ್ಷಣ ಮತ್ತು ಡಿಪ್ಲೋಮಪಡೆದವರಾಗಿದ್ದರು. ಶಾಲೆಯಲ್ಲಿಭಾಗವಹಿಸಿದವಿದ್ಯಾರ್ಥಿಗಳು ಎಲ್ಲಾ ರೀತಿಯ ಉದ್ಯಮಗಳನ್ನು ಪ್ರತಿನಿಧಿಸಿದ್ದರು. ಶಾಲೆಯಲ್ಲಿ ಅನೇಕ ವಿಷಯಗಳ ಕುರಿತಾಗಿ ತರಗತಿಗಳು ನಡೆದವು. ಮಾನವಸಮಾಜದ ವಿಕಾಸ, ಬಂಡವಾಳಶಾಹೀ ಶೋಷಣೆ ಮತ್ತು ಕ್ರಾಂತಿಕಾರೀ ಬದಲಾವಣೆ, ಸಿ.ಐ.ಟಿ.ಯು.ನ ಧ್ಯೇಯೋದ್ದೇಶಗಳು, ಟ್ರೇಡ್ ಯೂನಿಯನ್ನುಗಳ ಕರ್ತವ್ಯಕಾರ್ಮಿಕ ಕಾಯಿದೆಗಳು ಮುಂತಾದ ವಿಷಯಗಳ ಮೇಲೆತರಗತಿತೆಗೆದುಕೊಳ್ಳಲಾಯಿತು. ತರಬೇತಿಯಲ್ಲಿ ಪಾಠಗಳಷ್ಟೇ ಅಲ್ಲದೆ ಬೆಳಗಿನ ಸಮಯದಲ್ಲಿ ಡ್ರಿಲ್, ಚರ್ಚೆಗಳು, ಭಾಷಣಸ್ಪರ್ಧೆ,ಕರಪತ್ರಗಳನ್ನು ಬರೆಯುವ ಸ್ಪರ್ಧೆ,ಚಿತ್ರರಚನಾಸ್ಪರ್ಧೆ, ಕವನ ಬರೆಯುವ ಸ್ಪರ್ಧೆ, ವಿಪ್ಲವಗೀತೆಗಳನ್ನು ಹಾಡುವ ಸ್ಪರ್ಧೆಗಳನ್ನು ನಡೆಸಲಾಯಿತು. ಈ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನಗಳನ್ನು ನೀಡಲಾಯಿತು.

ತರಗತಿಯಲ್ಲಿ ಭಾಗವಹಿಸಿದ ಎಲ್ಲಾ ವಿದ್ಯಾರ್ಥಿಗಳನ್ನು 23 ಗುಂಪುಗಳಾಗಿ ವಿಂಗಡಿಸಿ ಆ ಗುಂಪುಗಳು ಪ್ರತಿ ರಾತ್ರಿಯೂ 9 ರಿಂದ 11 ಗಂಟೆಯವರೆಗೆ ಸಭೆ ಸೇರಿ ಆ ದಿನದ ಪಾಠಗಳ ಬಗ್ಗೆ ಚರ್ಚೆ ನಡೆಸುವಂತೆ ಮಾಡಲಾಯಿತು. ತರಬೇತಿಯ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಿದ ವಿದ್ಯಾರ್ಥಿಗಳು, ಉಪನ್ಯಾಸಗಳು ತುಂಬಾ ಮಹತ್ವದಾಗಿದ್ದು ಸುಲಭವಾಗಿಅರ್ಥವಾಗುತ್ತಿದ್ದವು ಎಂದರು.

ಶಿಬಿರದ ಕೊನೆಯದಿನ ಮಿರಿಯಾಲಗುಂಡದಲ್ಲಿ ಬೃಹತ್‌ಸಾರ್ವಜನಿಕಸಭೆ ನಡೆಯಿತು. ಸಭೆಗೆ ಸುತ್ತಮುತ್ತಲು ಹಳ್ಳಿಗಳಿಂದ ಸುಮಾರು 20 ಸಾವಿರ ಜನ ಬಂದಿದ್ದರು. ಸಭೆಯ ಸ್ಥಳದಲ್ಲಿ ಮಾನವ ಸಮಾಜದ ಬೆಳವಣಿಗೆ ಮತ್ತು ದುಡಿಯುವ ಜನತೆ ನಡೆಸಿದ ಹೋರಾಟಗಳ ಬಗ್ಗೆ ವಸ್ತು ಪ್ರದರ್ಶನ ಏರ್ಪಡಿಸಲಾಗಿದ್ದು ಸುಮಾರು 75 ಸಾವಿರ ಮಂದಿ ಅದನ್ನು ವೀಕ್ಷಿಸಿದರು.

○

ತಾರಾಯುದ್ಧಕ್ಕೆ ಸೋವಿಯೆತ್ ಉತ್ತರವಿದೆ

ಅಮೇರಿಕಾದ ಅಧ್ಯಕ್ಷ ರೇಗನ್‌ರ ತಾರಾ ಯುದ್ಧಕ್ಕೆ ಪರಿಣಾಮಕಾರೀ ಉತ್ತರವೊಂದು ಸೋವಿಯೆತ್ ಒಕ್ಕೂಟದ ಬಳಿಯಿದೆ. ಅಮೇರಿಕಾ ಮತ್ತು ಅದರ ಇತರ ಬಂಡವಾಳಶಾಹೀ ಮಿತ್ರರಿಗೆ ಇದು ಗೊತ್ತಿದೆ. ಆದರೆ ಅಮೇರಿಕಾ ತನ್ನ ಯೋಜನೆಯನ್ನು ಕೃತಿಗಿಳಿಸುವವರೆಗೆ ಸೋವಿಯೆತ್ ಒಕ್ಕೂಟ ತನ್ನದೇ ಆದ ಪರಮಾಣು ರಕ್ಷಣಾ ಕೋಟೆ ಅಭಿವೃದ್ಧಿ ಪಡಿಸುವುದಿಲ್ಲ ಎಂದು ಸೋವಿಯೆತ್ ಪರಮಾಣು ವಿಜ್ಞಾನಿ ಯೆವ್ಗೆನಿ ವೆಲ್ಲಿಕೋಫ್ ಹೇಳಿದ್ದಾರೆ. ಇವರು ಸೋವಿಯೆತ್ ವಿಜ್ಞಾನ ಅಕಾಡೆಮಿಯ ಉಪಾಧ್ಯಕ್ಷರೂ ಮತ್ತು ಸಿ.ಪಿ.ಎಸ್.ಯು. ಪ್ರಧಾನ ಕಾರ್ಯದರ್ಶಿ ಗೋರ್ಬಚೆವ್‌ರ ಪರಮಾಣು ನಿಶ್ಯಸ್ತ್ರೀಕರಣ ಸಲಹೆಗಾರರೂ ಕೂಡಾ.

ಈ ನಡುವೆ ಮಾಸ್ಕೋದಲ್ಲಿ ಅಮೇರಿಕನ್ ಹಾಗೂ ಸೋವಿಯೆತ್ ವಿಜ್ಞಾನಿಗಳ ನಡುವೆ ಅಕ್ಟೋಬರ್ 26ರಿಂದ 28ರವರೆಗೆ ತಾರಾಯುದ್ಧವನ್ನು ಸೀಮಿತಗೊಳಿಸುವ ಬಗ್ಗೆ "ಖಾಸಗೀ"ಮತ್ತು ಅನಧಿಕೃತ ಮಾತುಕತೆಗಳು ನಡೆದು ಎರಡೂ ದೇಶದ ವಿಜ್ಞಾನಿಗಳು ಸುಮಾರಾಗಿ ಪರಸ್ಪರ ಒಪ್ಪಂದ ವೊಂದಕ್ಕೆ ಬಂದಿದ್ದಾರೆ ಎಂದು ವರದಿಯಾಗಿದೆ. ಈ ಒಪ್ಪಂದಗಳೇನೇ ಇರಲಿ, ಮುಂದಿನ ದಶಕದಲ್ಲಿ ಜ್ಯಾರಿಗೆ ಬರಬೇಕೆಂದಿದ್ದ ಈ ಯೋಜನೆ ವಿಳಂಬಗೊಳ್ಳುವುದಂತೂ ನಿಸ್ಸಂಶಯ ಎಂದು ಹೇಳಲಾಗುತ್ತಿದೆ.

ಡಿಸೆಂಬರ್ 7ರಂದು ನಡೆಯಲಿರುವ ಸೋವಿಯೆತ್ ಹಾಗೂ ಅಮೇರಿಕನ್ ಮುಖಂಡರ ಶೃಂಗ ಸಭೆಯಲ್ಲಿ ಸಮೀಪಗಾಮಿ ಹಾಗೂ ಮಧ್ಯಮಾಂತರದ ಕ್ಷಿಪಣಿಗಳ ನಿಷೇಧದ ಬಗ್ಗೆ ಮಾತ್ರವಲ್ಲದೆ ಬೇರೆನಿಶ್ಯಸ್ತ್ರೀಕರಣ ಸಂಬಂಧಿ ವಿಷಯಗಳ ಬಗ್ಗೆಯೂ ಒಪ್ಪಂದ ಏರ್ಪಡಬಹುದೆಂದು ಸೋವಿಯೆತ್ ವಿದೇಶಾಂಗ ಇಲಾಖೆಯ ವಕ್ತಾರರ ಹೇಳಿದ್ದಾರೆ.

ನಮೀಬಿಯಾ : ಮತ್ತೆ ದ. ಆಫ್ರಿಕಾದ ಖಂಡನೆ

ನಮೀಬಿಯಾದಲ್ಲಿ ದಕ್ಷಿಣ ಆಫ್ರಿಕಾದ ವರ್ಣದ್ವೇಷಿಗಳು ತಮ್ಮ ಆಳ್ವಿಕೆಯನ್ನು ಇನ್ನೂ ಮುಂದುರೆಸುತ್ತಿರುವುದನ್ನು ವಿಶ್ವ ಸಂಸ್ಥೆಯ ಸಾಮಾನ್ಯ ಸಭೆ ನವಂಬರ್ 6ರಂದು ಮತ್ತೊಮ್ಮೆ ಬಲವಾಗಿ ಖಂಡಿಸಿ ಪ್ರಿಟೋರಿಯಾ ವರ್ಣದ್ವೇಷಿಗಳ ವಿರುದ್ಧ ಕಡ್ಡಾಯ ದಿಗ್ಬಂಧನ ಹೊರಿಸಬೇಕೆಂದು ಕರೆ ನೀಡಿದೆ.

ಜರ್ಮನಿಯ ವಸಾಹತುವಾಗಿದ್ದ ಈ ದೇಶವನ್ನು ಹಿಂದಿನ ಲೀಗ್ ಆಫ್ ನೇಶನ್ಸ್ ದಕ್ಷಿಣ ಆಫ್ರಿಕಾದ ಹತೋಟಿಗೊಳಪಡಿಸಿತ್ತು. ವಿಶ್ವಸಂಸ್ಥೆ ಈ ಬಗ್ಗೆ ಒಂದು ನಿರ್ಣಯ ಅಂಗೀಕರಿಸಿ ನಮೀಬಿಯಾವನ್ನು ದಕ್ಷಿಣ ಆಫ್ರಿಕಾದ ವರ್ಣದ್ವೇಷಿಗಳು ಕಾನೂನು ಬಾಹಿರವಾಗಿ ತಮ್ಮ ವಶದಲ್ಲಿಟ್ಟುಕೊಂಡಿದ್ದಾರೆ. ಅವರು ಅದನ್ನು ಬಿಟ್ಟುಕೊಡಬೇಕೆಂದು ಹೇಳಲಾಗಿತ್ತು. ಮತ್ತು ನಮೀಬಿಯಾದ ಸ್ವಾತಂತ್ರ್ಯದ ಯೋಜನೆಯೊಂದನ್ನು ತಯಾರಿಸಲಾಗಿತ್ತು. ಆದರೆ ಅಮೇರಿಕಾ ಹಾಗೂ ಅದರ ಪಾಶ್ಚಿಮಾತ್ಯ ಮಿತ್ರರ ಪರೋಕ್ಷ ನೆರವಿನಿಂದಾಗಿ ವಿಶ್ವಸಂಸ್ಥೆಯ ಈ ಸರ್ವಾನುಮತದ ಠರಾವು ಇನ್ನೂ ಜ್ಯಾರಿಗೆ ಬಂದಿಲ್ಲ.

ಮೊನ್ನೆ ನಡೆದ ಸಭೆಯಲ್ಲಿ ನೂರಕ್ಕೂ ಹೆಚ್ಚು ಪ್ರತಿನಿಧಿಗಳು ಈ ಯೋಜನೆಯ ಜ್ಯಾರಿ ಬಗ್ಗೆ ಒತ್ತಾಯಿಸಿದರೆ, ಅಮೆರಿಕಾ ಮತ್ತು ಬ್ರಿಟನ್ನಿನ ಪ್ರತಿನಿಧಿಗಳು ಕಡ್ಡಾಯ ಆರ್ಥಿಕ ದಿಂಗ್ಬಧನವನ್ನು ಮತ್ತೆ ತಮ್ಮ ಎಂದಿನ ವಿತಂಡವಾದ ಹೂಡಿ ವಿರೋಧಿಸಿದ್ದಾರೆ.

ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಸುಮಾರಾಗಿ ಎಲ್ಲಾ ಸದಸ್ಯರೂ ದಕ್ಷಿಣ ಆಫ್ರಿಕಾದ ವಿರುದ್ಧ ಆರ್ಥಿಕದಿಗ್ಬಂಧನ ಹೇರಬೇಕೆಂದು ಒತ್ತಾಯಿಸಿದರೂ, ಸಾಮಾನ್ಯ ಸಭೆಗೆ ಈ ಅಧಿಕಾರವಿಲ್ಲ. ಈ ಅಧಿಕಾರವಿರುವ ಭದ್ರತಾ ಸಮಿತಿಯಲ್ಲಿ ದಿಗ್ಬಂಧನಗಳನ್ನು ವಿರೋಧಿಸುತ್ತಿರುವ ಅಮೇರಿಕಾ ಮತ್ತು ಬ್ರಿಟನ್‌ಗೆ ನಿಷೇದಾಧಿಕಾರವಿದೆ. ಆದ್ದರಿಂದ ವಿಶ್ವಸಂಸ್ಥೆಯ ಈ ಠರಾವು ಇನ್ನೂ ಜ್ಯಾರಿಗೆ ಬಂದಿಲ್ಲ.

ಆಂಧ್ರ : ಇನ್ನೂ ನಿಲ್ಲದ ಸಿ. ಪಿ. ಐ. ಹಳೆಯ ಚಾಳಿ

ಜನತೆಯ ತುರ್ತು ಪ್ರಶ್ನೆಗಳ ಕುರಿತು ಮತ್ತು ರಾಜೀವಗಾಂಧಿ ಸರ್ಕಾರ ರಾಜೀನಾಮೆ ನೀಡಬೇಕೆಂದು ಒತ್ತಾಯಿಸಿ ಎಡ ಪಕ್ಷಗಳು ಮತ್ತು ಸಾಮೂಹಿಕ ಸಂಘಟನೆಗಳು ದೇಶವ್ಯಾಪಿ ಆಂದೋಲನವನ್ನು ನಡೆಸುತ್ತಿವೆ. ಇದಕ್ಕೆ ಎಲ್ಲೆಡೆ ಉತ್ಸಾಹದ ಪ್ರತಿಕ್ರಿಯೆ ದೊರೆಯುತ್ತಿದೆ. ಇದೇ ಸಂದರ್ಭದಲ್ಲೇ ಆಂಧ್ರ ಪ್ರದೇಶದ ಸಿ.ಪಿ.ಐ. ಘಟಕತೆಲುಗುದೇಶಂ ಸರ್ಕಾರವನ್ನು ಪದಚ್ಯುತಿಗೊಳಿಸಲು ಚಳವಳಿ ನಡೆಸುವ ತೀರ್ಮಾನ ಕೈಗೊಂಡಿದೆ. 'ಜನತಾ ಪೋರಾಟ ಸದಸ್ಯಲು' ಎಂಬ ಹೆಸರಿನಲ್ಲಿ ತೆಲಗುದೇಶಂ ಸರ್ಕಾರವನ್ನು ಕಿತ್ತೆಸೆಯುವ ಒಂದು ಅಂಶದ ಕಾರ್ಯಕ್ರಮದೊಂದಿಗೆ ಸಭೆಗಳನ್ನು ಸಂಘಟಿಸುತ್ತಿದೆ. ಅಕ್ಟೋಬರ್ 18ರಂದು ವಿಜಯವಾಡದಲ್ಲಿ ನಡೆದ ಸಿ.ಪಿ.ಐ.ನ ಬಹಿರಂಗ ಸಭೆಯಲ್ಲಿ 'ಭ್ರಷ್ಟ ಜನ ವಿರೋಧಿ ತೆಲುಗುದೇಶಂಸರ್ಕಾರವನ್ನು ಕಿತ್ತೆಸೆಯುವಂತೆ ಕರೆ ನೀಡಲಾಗಿದೆ. ಈ ಸಭೆಯ ಪ್ರಮುಖ ಭಾಷಣಕಾರ ಸಿ.ಪಿ.ಐ. ರಾಜ್ಯ ಮಂಡಳಿಯ ಕಾರ್ಯದರ್ಶಿ ಗಿರಿಪ್ರಸಾದ್. ಸಿ.ಪಿ.ಐ.(ಎಂ) ಅನ್ನು 'ಭಜನವಾಲಾ'ಗಳೆಂದೂ ಎನ್.ಟಿ.ರಾಮರಾವ್ ಸರ್ಕಾರದ ಕಾವಲುಗಾರರೆಂದೂ ಆರೋಪಿಸಿದ್ದಾರೆ.

ಆಂಧ್ರಪ್ರದೇಶದ ಸಿ.ಪಿ.ಐ. ನಾಯ [illegible]

ಸುತ್ತಿರುವ ಈ ಧಾಳಿಯು ಸಿ.ಪಿ.ಐ. ಅನ್ನು ಒಳಗೊಂಡಂತೆ ಎಲ್ಲಾ ಎಡ ಪಕ್ಷಗಳೂ ರಾಜೀವಗಾಂಧಿ ಸರ್ಕಾರದ ರಾಜೀನಾಮೆಗೆ ಮತ್ತು ಹೊಸ ಚುನಾವಣೆಗೆ ಒತ್ತಾಯಿಸಿ ಅಂಗೀಕರಿಸಿರುವ ನಿಲುವೆಯಿಂದ ದೂರ ಸರಿಯುತ್ತಿರುವುದನ್ನು ಮರೆಮಾಚಿಕೊಳ್ಳಲು ನಡೆಸುತ್ತಿರುವ ಯತ್ನವಾಗಿದೆ. ಈಗ ನಡೆಯುತ್ತಿರುವ ರಾಷ್ಟ್ರೀಯ ಆಂದೋಲನದಿಂದ ಜನತೆಯ ಗಮನವನ್ನು ವಿಮುಖಗೊಳಿಸುವ ಉದ್ದೇಶದ್ದಾಗಿದೆ.

ಕಾಂಗ್ರೆಸ್(ಐ)ನ ಆಡಳಿತ ಮತ್ತು ಧೋರಣೆಗಳಿಗೆ ವಿಶಾಲ ಪ್ರತಿರೋಧ ಒಡ್ಡುವ ಸಲುವಾಗಿ ತೆಲುಗುದೇಶಂ ಪಕ್ಷವನ್ನು ತಮ್ಮೊಡನೆ ಸೇರಿಸಿಕೊಳ್ಳುವ ಸಿ.ಪಿ.ಐ.(ಎಂ)ನ ಸರಿಯಾದ ನಿಲುವಿನ ಮೇಲೆ ಸಿ.ಪಿ.ಐ. ನಡೆಸುತ್ತಿರುವ ಮಿಥ್ಯಾರೋಪಗಳು ಕಾಂಗ್ರೆಸ್(ಐ) ಅನ್ನು ಸರ್ವಾಧಿಕಾರೀ ಮತ್ತು ಜನ ವಿರೋಧಿ ಪಕ್ಷವೆಂಬುದನ್ನು ಸಿ.ಪಿ.ಐ.ನ ರಾಜ್ಯ ನಾಯಕರು ನಿರಾಕರಿಸುತ್ತಿರುವುದರ ಸ್ಪಷ್ಟ ಸೂಚನೆಯಾಗಿದೆ. ವೆಂಗಲ್‌ರಾವ್ ಆಂಧ್ರದ ಮುಖ್ಯಮಂತ್ರಿಯಾಗಿದ್ದಾಗ ಸಿ.ಪಿ.ಐ.ನ ರಾಜ್ಯ ನಾಯಕರು ಇಂದಿರಾ ಕಾಂಗ್ರೆಸ್ಸನ್ನು ಹೊಗಳುತ್ತಿದ್ದರು. ಈ ಅಭ್ಯಾಸವನ್ನು ಇವರು ಇನ್ನೂ ಬಿಟ್ಟಿಲ್ಲವೆಂದು ಕಾಣಿಸುತ್ತದೆ. ವೆಂದರೆ ಜಾತ್ಯಾತೀತ ವಿರೋಧ ಪಕ್ಷಗಳನ್ನು ವಿಶಾಲ ಪ್ರಮಾಣದಲ್ಲಿ ಅಣಿನೆರೆಸಿ ಕಾಂಗ್ರೆಸ್(ಐ)ನ ಧೋರಣೆಗಳನ್ನು ಮತ್ತು ಛಿದ್ರಕಾರಿ ಶಕ್ತಿಗಳ ಆಕ್ರಮಣವನ್ನು ಸಮರ್ಥವಾಗಿ ಎದುರಿಸುವುದೇ ಆಗಿದೆ. ಆಂಧ್ರಪ್ರದೇಶದ ಸಿ.ಪಿ.ಐ. ಘಟಕ ಈಗ ಅನುಸರಿಸುತ್ತಿರುವ ತಂತ್ರ ಇದಕ್ಕೆ ತಡೆಯನ್ನುಂಟು ಮಾಡುತ್ತದೆ. ಸಿ.ಪಿ.ಐ.(ಎಂ) ತನ್ನ ರಾಜಕೀಯ ನಿಲುವೆಯಿಂದ ದೂರ ಸರಿಯದೆ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಐಕ್ಯತೆಯನ್ನು ರೂಪಿಸುತ್ತಿದೆ. ತೆಲುಗುದೇಶಂ ಪಕ್ಷಕ್ಕೆ ಸಂಬಂಧಿಸಿದಂತೆ ಕೂಡ ಪಕ್ಷ ಇದೇ ನೀತಿಯನ್ನು ಅನುಸರಿಸುತ್ತಿದೆ. ಪ್ರಮುಖ ಕಾಂಗ್ರೆಸ್ಸೇತರ ಪಕ್ಷಗಳೊಂದಿಗೆ ಸಿ.ಪಿ.ಐ.(ಎಂ) ಆಂಧ್ರದಲ್ಲಿ ಮೈತ್ರಿ ಹೊಂದಿದೆ. ಕಾಂಗ್ರೇಸ್[ಐ]ನ ಸರ್ವಾಧಿಕಾರೀ ಮತ್ತು ಜನ ವಿರೋಧಿ ಧೋರಣೆಯ ವಿರುದ್ಧ ಹೋರಾಟ ನಡೆಸುವ ಪ್ರಶ್ನೆ ಕುರಿತಂತೆ ಸಿ.ಪಿ.ಐ.(ಎಂ) ತೆಲುಗುದೇಶಂನೊಂದಿಗೆ ಒಂದುಗೂಡಿದೆ. ಇಂ ಸಮಯದಲ್ಲಿ ರಾಜ್ಯದ ದುಡಿಯುವ ಜನತೆಯ ಹಿತಕ್ಕೆ ಮಾರಕವಾಗುವಂತಹ ತೆಲುಗುದೇಶಂನ ಯಾವುದೇ ಧೋರಣೆಯನ್ನು ಸಿ.ಪಿ.ಐ. (ಎಂ) ವಿರೋಧಿಸುತ್ತದೆ. ಸಿ.ಪಿ.ಐ.[ಎಂ]ನ ಈ ರೀತಿಯ ಸ್ವತಂತ್ರ ನಿಲುವು [illegible]

ಶಕ್ತಿಗಳ ಮುನ್ನಡೆಗೆಸಹಾಯ ಮಾಡುತ್ತದೆ.

ಕಾಂಗ್ರೆಸ್(ಐ)ನ ವಿರುದ್ಧ ಎಡ, ಪ್ರಜಾಸತ್ತಾತ್ಮಕ ಜಾತ್ಯಾತೀತ ಶಕ್ತಿಗಳ ಐಕ್ಯತೆಯನ್ನು ಮುನ್ನಡೆಸುವ ನಿಲುವಿಗೆ ಆಂಧ್ರಪ್ರದೇಶದ ಸಿ.ಪಿ.ಐ. ಪ್ರಾಮಾಣಿಕವಾಗಿದ್ದಲ್ಲಿ ತೆಲುಗುದೇಶಂ ಬಗೆಗಿನ ಈಗಿನ ತನ್ನ ಮನೋಭಾವವನ್ನು ಕೈಬಿಟ್ಟು, ಎಡ ಮತ್ತು, ಜಾತ್ಯಾತೀತ ವಿರೋಧ ಪಕ್ಷಗಳೊಂದಿಗೆ ಸೇರಿ ರಾಜೀವ್ ಸರ್ಕಾರದ ವಿರುದ್ಧ ಆಂದೋಲನದಲ್ಲಿ ಪಾಲ್ಗೊಂಡು ಎಡ ಪಕ್ಷಗಳ ರಾಷ್ಟ್ರೀಯ ನಿಲುವನ್ನು ಬೆಂಬಲಿಸಲಿ.

ಸಂಕ್ಷಿಪ್ತ ಸುದ್ದಿಗಳು

ಐ. ಎಂ. ಎಫ್. ಬಲೆಯಲ್ಲಿ ಈಜಿಪ್ಟ್

ಈಜಿಪ್ಟ್‌ನ ವಿದೇಶೀ ಸಾಲದ ಹೊರೆ 40ಶತಕೋಟಿ ಡಾಲರ್‌ಗೇರಿದೆ.ಆದ್ದರಿಂದ ನಾಲ್ಕೂವರೆ ಶತಕೋಟಿ ಡಾಲರುಗಳಐ.ಎಂ.ಎಫ್.ಸಾಲದ ಮರುಪಾವತಿಯನ್ನು ಪುನರ್ಪರಿಶೀಲಿಸುವ ಬಗ್ಗೆ ಐ.ಎಂ.ಎಫ್. ಮತ್ತು ಈಜಿಪ್ಟ್ ಸರ್ಕಾರ ಸಬ್ಸಿಡಿಗಳ ರದ್ದು, ಖಾಸಗಿ ಕಂಪೆನಿಗಳ ಲಾಭದ ಮಿತಿಯ ಹೆಚ್ಚಳ, ಜೀವನಾವಶ್ಯಕ ಸಾಮಗ್ರಿಗಳ ಬೆಲೆಯೇರಿಕೆ ಮೊದಲಾದ ಕ್ರಮಗಳನ್ನು ಕೈಗೊಳ್ಳಬೇಕೆಂದು ಐ.ಎಂ.ಎಫ್. ಒತ್ತಾಯಿಸುತ್ತಿದೆ.

ಈಜಿಪ್ಟ್‌ನ ಅಧಿಕ ಸ್ವಾತಂತ್ರ್ಯ ಈ ರೀತಿ ನಷ್ಟವಾಗಲು ಅಮೇರಿಕಾದೊಂದಿಗೆ ಅದರ ವಿಶೇಷ ಸಂಬಂಧಗಳೇ ಕಾರಣ ಎಂದು ಹೇಳಲಾಗುತ್ತಿದೆ. ಅಮೇರಿಕಾದಿಂದ ಅತೀ ಹೆಚ್ಚು ನೆರವು ಪಡೆದ ದೇಶಗಳಲ್ಲಿ ಇಸ್ರೇಲ್ ನಂತರ ಈಜಿಪ್ಟ್‌ನ ಹೆಸರು ಬರುತ್ತದೆ. ಆದರೆ ಕಳೆದ ಒಂದು ದಶಕದಲ್ಲಿ ಪಡೆದ 18 ಶತಕೋಟಿ ಡಾಲರುಗಳಲ್ಲಿ ಸುಮಾರಾಗಿ ಎಲ್ಲವೂ ಮಿಲಿಟರಿಗಾಗಿಯೇ ಪಡೆದ ಸಾಲ !

ಅಕ್ವಿನೋ : ಮಾತಿನಲ್ಲಿ ಶರಣಾಗುವುದಿಲ್ಲ-ಕೃತಿಯಲ್ಲಿ ?

ತನ್ನ ಸರ್ಕಾರ ರೇಗನ್ ಆಡಳಿತದ ಬೆಂಬಲದ ಮೇಲೆ ಬಹಳವಾಗಿ ಅವಲಂಬಿಸಿದ್ದರೂ ಕೂಡಾ ಎಂದೂ ಅಮೇರಿಕಾದ ಒತ್ತಡಕ್ಕೆ ತಲೆ ಬಾಗುವುದಿಲ್ಲ ಎಂದು ಫಿಲಿಪ್ಪೈನ್ಸ್ ಅಧ್ಯಕ್ಷೆ ಕೊರಾಝೋನ್ ಅಕ್ವಿನೋ ಹೇಳಿದ್ದಾರೆ. "ಹಲವಾರು ಕೆಲಸಗಳನ್ನು ನಾವಾಗಿಯೇ ಮಾಡಲು ನಮಗೆ ಸಾಧ್ಯವಾಗಿದೆ. ನಮ್ಮ ಸ್ವಾತಂತ್ರ್ಯದ ಬಗ್ಗೆ ನಮಗೆ ಬಹಳ ಹೆಮ್ಮೆ" ಎಂದು ಅವರು ಹೇಳುತ್ತಿರುವಂತೆ ದೇಶದ ಉತ್ತರ ಭಾಗದ ಕ್ಲಾರ್ಕ್ ಅಮೆರಿಕನ್ ವಿಮಾನ ನೆಲೆಯ ಸುತ್ತ ಮುತ್ತ ಸಿಟ್ಟಾದ ಫಿಲಿಪ್ಪೈನೋ ಸೈನಿಕ ಪಡೆಗಳು ಜಂಟಿ ಕಾರ್ಯಾಚರಣೆಗಳಲ್ಲಿ ತೊಡಗಿವೆ ಎಂದು ವರದಿಯಾಗಿದೆ. ಈ ಜಂಟೀ ಕಾರ್ಯಾಚರಣೆಗಳು ಫಿಲಿಪ್ಪೈನ್ಸ್‌ನ ಸಾರ್ವಭೌಮತೆಗೊಂದು ಸವಾಲು ಎಂದು ರಾಷ್ಟ್ರೀಯ ಪ್ರಜಾಪ್ರಭುತ್ವ ರಂಗದ ವಕ್ತಾರರು ಖಂಡಿಸಿದ್ದಾರೆ.

ಕೇರಳದಲ್ಲಿ : ಸ್ಫೂರ್ತಿದಾಯಕ ಪಂಜಾಬ್ ದಿನಾಚರಣೆ

ಅಕ್ಟೋಬರ್ 8 ರಂದು ಕೇರಳದಾದ್ಯಂತ 'ಪಂಜಾಬ್‌ದಿನ'ವನ್ನು ಸ್ಫೂರ್ತಿಶಾಲಿಯಾಗಿ ಆಚರಿಸಲಾಯಿತು. ರಾಜ್ಯದ ಎಲ್ಲಾ ನಗರಗಳಲ್ಲಿ, ಸಣ್ಣ ಪಟ್ಟಣಗಳಲ್ಲಿ ಹಳ್ಳಿಗಾಡುಗಳಲ್ಲಿಪ್ರಜ್ಞಾವಂತ ಜನತೆ ಹಾಡುತ್ತಾ,ನರ್ತಿಸುತ್ತಾ ಪಂಜಾಬ್ ಜನತೆ ಪ್ರತ್ಯೇಕತಾವಾದಿಗಳ ವಿರುದ್ಧ, ದೇಶದ ಭದ್ರತೆ–ಸ್ವಾತಂತ್ರ್ಯ ಮತ್ತು ಐಕ್ಯತೆಯನ್ನು ಕಾಪಾಡಲು ನಡೆಸುತ್ತಿರುವ ವೀರೋಚಿತ ಹೋರಾಟಗಳನ್ನು ಹಳ್ಳಿಹಳ್ಳಿಗೆ, ಮನೆಮನೆಗೆ ತೆರಳಿ ವಿವರಿಸಿ ಪಂಜಾಬ್, ಹೋರಾಟಕ್ಕೆಬೆಂಬಲವನ್ನು ಕೋರುವಅಪೂರ್ವ ಕಾರ್ಯಕ್ರಮ ಹಮ್ಮಿಕೊಂಡಿತು.

ಆಗಸ್ಟ್ 15 ರಂದು ರಾಷ್ಟ್ರೀಯ ಸಮಗ್ರತೆಯ ಸಂಕೇತವಾಗಿ ಕೇರಳದಲ್ಲಿ ನಡೆದ 700 ಕಿ ಮೀ. ಉದ್ದದ ಮಾನವ ಸರಪಳಿ ಕಾರ್ಯಕ್ರಮವನ್ನು ನಡೆಸಿದ ಕೇರಳದ ಜನತೆ ಮತ್ತೊಮ್ಮೆ ಪಂಜಾಬ್ ಜನತೆಯ ಹೋರಾಟಕ್ಕೆ ಬೆಂಬಲವನ್ನು ಒಟ್ಟುಗೂಡಿಸಲು ಅ.8 ರಂದು ಮತ್ತೊಂದು ಬೃಹತ್ ಕಾರ್ಯಕ್ರಮ ನಡೆಸಿದರು. ರಸ್ತೆಗಳಲ್ಲಿ, ಮನೆಗಳಲ್ಲಿ, ಕಚೇರಿಗಳಲ್ಲಿ,ಕಾರ್ಖಾನೆಗಳಲ್ಲಿ, ಹೊಲಗದ್ದೆಗಳಲ್ಲಿ ಜನರನ್ನು ಭೇಟಿಯಾದ ಸಿ.ಪಿ.ಐ.(ಎಂ) ಕಾರ್ಯಕರ್ತರು ಎಲ್ಲೆಲ್ಲೂ ಉತ್ಸಾಹದ ಸ್ವಾಗತವನ್ನೇ ಪಡೆದರು. ಜನರ ಪ್ರತಿಕ್ರಿಯೆ ಕೂಡ ಸ್ಫೂರ್ತಿದಾಯಕವಾಗಿತ್ತು. ಎಲ್ಲಾ ರಾಜಕೀಯ, ಸಾಮಾಜಿಕ, ಧಾರ್ಮಿಕ ಅಂತರಗಳನ್ನು ಮರೆತಂತೆ ಕಂಡುಬಂದ ಜನಸಮೂಹ ಪಂಜಾಬ್ ಜನತೆಗೆ ಒಕ್ಕೊರಲಬೆಂಬಲ ವ್ಯಕ್ತಪಡಿಸಿತು.

ಸಿ.ಪಿ.ಐ.(ಎಂ)ನ ಪಂಜಾಬ್‌ಘಟಕ ಅತ್ಯಂತ ಕಷ್ಟಕರ ಪರಿಸ್ಥಿತಿಯಲ್ಲಿ ಕೆಲಸ ಮಾಡುತ್ತಿದೆ. ಸಿಖ್ ಪ್ರತ್ಯೇಕತಾವಾದಿಗಳು ವಿದೇಶಿ ಶಕ್ತಿಗಳ ಕುಮ್ಮಕ್ಕಿನಿಂದ ನಮ್ಮ ಪಕ್ಷದ ಮೇಲೆ ಗಂಭೀರ ಸ್ವರೂಪದ ಧಾಳಿ ನಡೆಸುತ್ತಿದೆ.ನಮ್ಮ ಅನೇಕ ಸಂಗಾತಿಗಳನ್ನು ಅವರು ಕೊಂದಿದ್ದಾರೆ. ಇದರ ವಿರುದ್ಧ ವೀರ ಕಮ್ಯುನಿಸ್ಟರು ಅಗಾಧ ಪ್ರತಿರೋಧ ಒಡ್ಡುತ್ತಿದ್ದಾರೆ. ಇವರಿಗೆ ಇಡೀ ದೇಶ ಇಂದು ನೆರವು ನೀಡಬೇಕಾಗಿದೆ ಎಂಬುದಾಗಿ ಕೇರಳದ ಸಿ.ಪಿ.ಐ.(ಎಂ) ರಾಜ್ಯಕಾರ್ಯದರ್ಶಿ ಮಂಡಳಿ ಜನತೆಗೆ ಮಾಡಿಕೊಂಡಿರುವ ಮನವಿಯಲ್ಲಿ ತಿಳಿಸಿದೆ.

ಹಳ್ಳಿಗಳಲ್ಲಿ ಪಾರ್ಟಿ ಕಾರ್ಯಕರ್ತರು ಗುಂಪುಗಳಲ್ಲಿ ಮನೆಮನೆಗೆ ತೆರಳಿ ಪ್ರಚಾರ ನಡೆಸಿದರು. ನಗರ ಪ್ರದೇಶಗಳಲ್ಲಿ ಜಾಥಾಗಳನ್ನು ಸಂಘಟಿಸಿ ಅಂಗಡಿಗಳಿಂದ ಪಂಜಾಬ್ ನಿಧಿಗೆ ಹಣ ಸಂಗ್ರಹಿಸಿದರು. ಬಸ್ ನಿಲ್ದಾಣ, ರೈಲ್ವೇ ನಿಲ್ದಾಣಗಳಲ್ಲೂ ನಿಧಿ ಸಂಗ್ರಹ ನಡೆಸಲಾಯಿತು.

REG No. BG -148 MAG (2) PRB DECR 319/ 78-79

ರಾಷ್ಟ್ರವ್ಯಾಪಿ ಜಾಥಾ ಹಾಗೂ ಪಾರ್ಲಿಮೆಂಟ್ ಚಲೋ

(1ನೇ ಪುಟದಿಂದ)

ಈ ಅತೃಪ್ತಿ ಸಿಡಿದೆದ್ದಿದೆ. ಹೀಗೆ ಪ್ರಕಟವಾಗುತ್ತಿರುವ ಜನತೆಯ ಕ್ರೋಧವನ್ನು ಪರಸ್ಪರ ಸಮನ್ವಯಗೊಳಿಸಲು ಅವಕಾಶಗಳಿವೆ ಯೆನ್ನುವುದನ್ನೂ ಗಮನಿಸಿದ ಕೇಂದ್ರ ಸಮಿತಿ ಮುಖ್ಯವಾಗಿ ರೈತಾಪಿ ಜನರ ಹೋರಾಟಗಳನ್ನು ಅನೇಕ ವೇಳೆ ಪೋಲೀಸು ದಬ್ಬಾಳಿಕೆಯಿಂದ ಹತ್ತಿಕ್ಕಲಾದರೂ ಕೆಲವೊಮ್ಮೆಯಾದರೂ ಕೇಂದ್ರ ಸರಕಾರವೂ ಹಿಮ್ಮೆಟ್ಟಬೇಕಾಯಿತೆನ್ನುವುದನ್ನೂ ಗುರುತಿಸಿಕೊಂಡಿದೆ. ಬೆಲೆಯೇರಿಕೆಯ ವಿರುದ್ಧ ಹೋರಾಡುತ್ತಿರುವ ಜನರ ಮೇಲೆ ಕಾಂಗ್ರೆಸ್ (ಐ) ಆಡಳಿತವಿರುವ ರಾಜ್ಯಗಳಲ್ಲಿ ಗುಂಡಿನ ಮಳೆಗರೆದು ದಮನಿಸಿದ ಮೇಲೂ ಆ ಎಲ್ಲ ರಾಜ್ಯಗಳಲ್ಲೂ ಮತ್ತೊಮ್ಮೆ ಮುಷ್ಕರದ ಅಲೆಗಳ ಅಬ್ಬರ ಪ್ರಾರಂಭವಾಗಿದೆ.

ಜನತೆಯ ಮನೋಭಾವ ಹೇಗೆ ಬದಲಾಗುತ್ತಿದೆಯೆನ್ನುವುದಕ್ಕೆ ಸರಕಾರದ ಭ್ರಷ್ಟಾಚಾರವನ್ನು ಪ್ರತಿಭಟಿಸಿ ಹೊರಬಂದ ವಿ.ಪಿ.ಸಿಂಗ್ ಮತ್ತು ಅವರ ಗೆಳೆಯರು ಪಡೆಯುತ್ತಿರುವ ಉತ್ತೇಜಕ ಪ್ರತಿಕ್ರಿಯೆ ಸಾಕ್ಷಿ. ಒಟ್ಟಿನಲ್ಲಿ ರಾಜೀವಗಾಂಧಿ 1984ರಲ್ಲಿ ಜನರಿಂದ ಯಾವ ವಿಶ್ವಾಸವನ್ನು ಪಡೆದಿದ್ದರೋ ಅದನ್ನು ಅವರು ಈಗ ಖಂಡಿತವಾಗಿ ಉಳಿಸಿಕೊಂಡಿಲ್ಲ.

ಚುನಾವಣಾ ಫಲಿತಾಂಶಗಳು ಏನು ಹೇಳುತ್ತಿವೆ?

ಹರಿಯಾಣ ಚುನಾವಣೆಗಳಲ್ಲಿ ಕಾಂಗ್ರೆಸ್ (ಐ) ಪಕ್ಷ 90 ಸ್ಥಾನಗಳ ಪೈಕಿ ಕೇವಲ ಐದನ್ನು ಮಾತ್ರ ಗೆದ್ದು ಮುಖ ಭಂಗ ಅನುಭವಿಸಿದೆ. ಇದಕ್ಕೆ ತುಸುವೇ ಮೊದಲು ಪ ಬಂಗಾಳದಲ್ಲಿ ಕಾಂಗ್ರೆಸ್ (ಐ) ಸೋತು ಮಣ್ಣು ಮುಕ್ಕಿದೆ. ಕೇರಳದಲ್ಲಂತೂ ಎಲ್ಲ ಬಣ್ಣದ ಕೋಮುವಾದಿ, ಜಾತೀಯವಾದಿ ಶಕ್ತಿಗಳ ಜೊತೆ ಸಂದರ್ಭ ಸಾಧಕ ಮೈತ್ರಿ ಮಾಡಿಕೊಂಡಿದ್ದ ಕಾಂಗ್ರೆಸ್(ಐ) ಪಕ್ಷವನ್ನು ಜನತೆ ಖಡಾಖಂಡಿತವಾಗಿ ತಿರಸ್ಕರಿಸಿದ್ದಾರೆ. ಈ ಹಿನ್ನೆಲೆಯಲ್ಲಿ ರಾಜೀವಗಾಂಧಿ ರಾಜೀನಾಮೆ ನೀಡಿ ಮಧ್ಯಂತರ ಚುನಾವಣೆ ನಡೆಸಬೇಕೆಂಬುದು ಎಲ್ಲಾ ವಿರೋಧ ಪಕ್ಷಗಳ ಒಮ್ಮತದ ಬೇಡಿಕೆ. ಆದರೆ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಕೇಂದ್ರ ಸಮಿತಿ ಹೇಳಿರುವಂತೆ ಈ ಪರಿಸ್ಥಿತಿಯನ್ನು ರಾಜೀವಗಾಂಧಿಯ ಆಡಳಿತೆಯ ನೆರಳಲ್ಲೇ ಬೆಳೆದು ಬಂದಿರುವ ಕೋಮುವಾದಿ ಮತ್ತು ವಿಚ್ಛಿದ್ರಕಾರಿ ಶಕ್ತಿಗಳೂ ತಮ್ಮ ದುರ್ಲಾಭಕ್ಕೆ ಬಳಸಿಕೊಳ್ಳಲು ಹವಣಿಸುತ್ತಿವೆ. ಕಾಂಗ್ರೆಸ್ (ಐ) ನ ವಿರುದ್ಧ ಬೆಳೆದು ಬರಬೇಕಾಗಿರುವ ಜನತೆಯ ಒಗ್ಗಟ್ಟನ್ನು ಮುರಿಯಲು ಇವಕ್ಕೆ ತುಂಬಾ ತವಕ. ಆದರೆ ಈಗಬೆಳೆದುಬರುತ್ತಿರುವ ಸಾಮುದಾಯಿಕ ಹೋರಾಟಗಳನ್ನು ಸರಿಯಾದ ಮಾರ್ಗದಲ್ಲಿ ನಿರ್ದೇಶಿಸಿ ಕೊಂಡೊಯ್ದರೆ ಪ್ರತ್ಯೇಕವಾದಿ ಮತ್ತು ಛಿದ್ರಕಾರಿ ಶಕ್ತಿಗಳ ಕೂಟವನ್ನು ವಿಫಲಗೊಳಿಸಿ ಜನತೆಯ ಐಕ್ಯತೆಯನ್ನು ದೃಢಗೊಳಿಸಬಹುದು. ಇಂದಿನ ಪರಿಸ್ಥಿತಿಯಲ್ಲಿ ಎಲ್ಲ ಜಾತ್ಯಾತೀತ ವಿರೋಧ ಪಕ್ಷಗಳನ್ನು ಒಂದು ಗೂಡಿಸಬೇಕು ಮತ್ತು ಈ ಜಾತ್ಯಾತೀತ ವಿರೋಧ ಪಕ್ಷಗಳ ಹಾಗೂ ಎಡ ಪಕ್ಷಗಳ ಐಕ್ಯತೆಯನ್ನು ಸಾಧಿಸಿದರೆ ಮಾತ್ರ ಕೇಂದ್ರದಲ್ಲಿ ಆಳುತ್ತಿರುವ ಕುಖ್ಯಾತ ಸರಕಾರವನ್ನು ಒದ್ದೋಡಿಸುದುವು ಸಾಧ್ಯ, ಇದು ಕೇಂದ್ರ ಸಮಿತಿಯ ತೀರ್ಮಾನ.

ಎರಡು ಧೋರಣೆಗಳು

ಒಂದೆಡೆ ಬಿ.ಜೆ.ಪಿ. ಮತ್ತಿತರ ಕೋಮುವಾದಿ ಹಾಗೂ ವಿಚ್ಛಿದ್ರಕಾರಿ ಪಕ್ಷಗಳು ಎಲ್ಲಾ ವಿರೋಧ ಪಕ್ಷಗಳು ಒಂದು ಗೂಡಬೇಕೆಂಬ ಕೊಗೆಬ್ಬಿಸುತ್ತಿವೆ. ಇವಕ್ಕೆ ಕೋಮುವಾದದ ಅಪಾಯದ ಬಗೆಗಾಗಲೀ ದೇಶವನ್ನು ಒಡೆಯಲು ಮುಂದಾಗಿರುವ ವಿಭಜಕ ಶಕ್ತಿಗಳ ಬಗೆಗಾಗಲೀ ದೇಶದ ಐಕ್ಯತೆ ಸಮಗ್ರತೆಯ ಕುರಿತಾಗಲೀ ಯಾವ ಕಾಳಜಿಯೂ ಇಲ್ಲ. ಎಡ ಪಕ್ಷಗಳು ಮತ್ತು ಜಾತ್ಯಾತೀತ ವಿರೋಧ ಪಕ್ಷಗಳ ನಡುವೆ ಒಡಕುಂಟು ಮಾಡಿ ಎಡ ಪಕ್ಷಗಳನ್ನು ದೂರವಿರಿಸುವುದೇ ಇದರ ಉದ್ದೇಶ.

ಇನ್ನೊಂದೆಡೆ ನಮ್ಮ ಪಕ್ಷವು ಎಡ ಪಕ್ಷಗಳ ಮತ್ತು ಜಾತ್ಯಾತೀತ ಶಕ್ತಿಗಳ ಐಕ್ಯತೆಯನ್ನು ಬಯಸುತ್ತದೆ. ರಾಜೀವಗಾಂಧಿ ಸರ್ಕಾರವನ್ನು ಕೆಳಕ್ಕಿಳಿಸಿ ಹೊಸ ಚುನಾವಣೆಯ ಮುಖಾಂತರ ಜನತೆ ತಮ್ಮ ಆಸೆಗಳಿಗೆ ಸ್ಪಂದಿಸುವ ಸರ್ಕಾರವನ್ನು ಆರಿಸಬೇಕೆನ್ನುವುದು ನಮ್ಮ ಉದ್ದೇಶ. ಇಂತಹ ಸರ್ಕಾರ ಜನತೆಯ ತಕ್ಷಣದ ಸಮಸ್ಯೆಗಳನ್ನು ಪರಿಹರಿಸುವುದರ ಜೊತೆಗೆ ಜಾಗತಿಕ ಶಾಂತಿ ಮತ್ತು ದೇಶದ ಐಕ್ಯತೆ ಕಾಪಾಡಲು ಸಮರ್ಥವಾಗಿರಬೇಕು. ಈ ಎರಡು ಧೋರಣೆಗಳ ನಡುವೆ ಇದೀಗ ಹೋರಾಟ ನಡೆಯುತ್ತಿದೆ. ಬಲ ಪಂಥಿಯ ಪಕ್ಷಗಳ ಧೋರಣೆ ನಮ್ಮ ದೇಶದ ಪ್ರಜಾಸತ್ತಾತ್ಮಕ ಚಳುವಳಿಗೆ ಎಂತಹ ಅಪಾಯ ತರಬಲ್ಲದು ಮತ್ತು ರಾಜೀವಗಾಂಧಿ ಸರ್ಕಾರದ ವಿರುದ್ಧ ನಡೆಯುವ ಹೋರಾಟದಲ್ಲಿ ಹೇಗೆ ಒಡಕುಂಟು ಮಾಡಬಲ್ಲದು ಎಂಬುದನ್ನು ಎಲ್ಲ ಜಾತ್ಯತೀತ ವಿರೋಧ ಪಕ್ಷಗಳೂ ಇದೀಗ ಹೆಚ್ಚು ಹೆಚ್ಚಾಗಿ ಅರ್ಥ ಮಾಡಿಕೊಳ್ಳಲಾರಂಭಿಸಿವೆ. ಅಕ್ಟೋಬರ್ 12 ರಂದು ದೆಹಲಿಯಲ್ಲಿ ಕೋಮುವಾದ ಮತ್ತು ಪ್ರತ್ಯೇಕವಾದದ ವಿರುದ್ಧ ನಡೆದ ರಾಷ್ಟ್ರೀಯ ಸಮಾವೇಶ ಹಾಗೂ ಅಕ್ಟೋಬರ್ 15ರಂದು ಲಕ್ನೋದಲ್ಲಿಸಿ.ಪಿ.ಐ (ಎಂ) ಸಿ.ಪಿ ಐ. ಲೋಕದಳ (ಬಿ) ಮತ್ತು ಜನತಾ ಪಕ್ಷಗಳು ಸಂಘಟಿಸಿದ್ದ ಬೃಹತ್ ರ್‍ಯಾಲಿಗಳು ಇದಕ್ಕೆ ನಿದರ್ಶನ.

ಆದರೆ ಇದಿಷ್ಟೇ ಸಾಲದು ಎಡ ಮತ್ತು ಜಾತ್ಯಾತೀತ ಪಕ್ಷಗಳ ಒಗ್ಗಟ್ಟನ್ನೂ ಅವುಗಳ ಜೊತೆಗೆ ಪ್ರಜಾಸತ್ತಾತ್ಮಕ ಶಕ್ತಿಗಳ ಐಕ್ಯತೆಯನ್ನು ಸಾಧಿಸಿ ಅವೆಲ್ಲವೂ ತಮ್ಮ ಸಾಮರ್ಥ್ಯವನ್ನು ಹೆಚ್ಚಿಸಿಕೊಂಡು ದೇಶದ ರಾಜಕೀಯ ವಿದ್ಯಮಾನಗಳ ಮೇಲೆ ತೀವ್ರವಾಗಿ ಆದಷ್ಟು ಬೇಗನೇ ಪರಿಣಾಮ ಬೀರುವಂತಾದರೆ ಮಾತ್ರ ಜನಸಾಮಾನ್ಯರಿಗೆ ಅದರಿಂದ ಪ್ರಯೋಜನವಾದಿತೆಂಬುದನ್ನು ನಮ್ಮ ಪಕ್ಷದ ಕೇಂದ್ರ ಸಮಿತಿ ಒತ್ತಿಹೇಳಿದೆ.

ಡಿಸೆಂಬರ್ 9ರ ಪಾರ್ಲಿಮೆಂಟ್ ಚಲೋ ಮತ್ತು ಅದಕ್ಕೆ ಪೂರ್ವಭಾವಿಯಾಗಿ ದೇಶಾದ್ಯಂತ ಪ್ರಚಾರ ಜಾಥಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾದುದು ಈ ದೃಷ್ಟಿಯಿಂದಲೇ.

ಎಡ ಶಕ್ತಿಗಳ ಬಲ ಅಧಿಕಗೊಂಡಿದೆ.

ನಮ್ಮ ಎಡ ಮತ್ತು ಎಡ ಪ್ರಜಾಸತ್ತಾತ್ಮಕ ಸರಕಾರಗಳ ಮೂಲಕ ನಾವು ಅನುಸರಿಸಿದ ಬದಲೀ ಧೋರಣೆಗಳಿಂದಾಗಿ ಮತ್ತು ಕಾಂಗ್ರೆಸ್(ಐ)ನ ಗುತ್ತೇದಾರಿ ಆಡಳಿತೆಗೆ ನಾವು ತೋರಿಸಿದ ತತ್ವನಿಷ್ಠ ವಿರೋಧದಿಂದಾಗಿ ಎಡ ಶಕ್ತಿಗಳ ಬಲ ಹತ್ತು ವರ್ಷದ ಹಿಂದಿನ ಪರಿಸ್ಥಿತಿಗೆ ಹೋಲಿಸಿದರೆ ತುಂಬಾ ಅಧಿಕಗೊಂಡಿದೆ. ಜನರ ನಡುವೆ ನಮ್ಮ ಗೌರವ, ವಿಶ್ವಾಸಾರ್ಹತೆ ಹೆಚ್ಚಾಗಿದೆ. ಚುನಾವಣಾ ಫಲಿತಾಂಶಗಳದೃಷ್ಟಿಯಲ್ಲಿ ಇಡೀ ರಾಷ್ಟ್ರದ ಮಟ್ಟದಲ್ಲಿ ನಾವು ಸಾಕಷ್ಟು ಬಲಶಾಲಿಗಳಾಗಿ ಕಾಣದಿದ್ದರೂ ನಮ್ಮ ಮುಂದಾಳುತ್ವದಲ್ಲಿನ ಸಾಮೂಹಿಕ ಹೋರಾಟಗಳು ದೇಶದ ಮೂಲೆ ಮೂಲೆಗೂ ಹಬ್ಬಿವೆ. ಪಂಜಾಬಿನ ಪ್ರತ್ಯೇಕವಾದಿಗಳ ವಿರುದ್ಧ ನಾವು ನಡೆಸುತ್ತಿರುವ ಧೀರೋದಾತ್ತ ಹೋರಾಟದಲ್ಲಿ ಇದನ್ನು ಕಾಣಬಹುದು ಮುಂದಿನ ತಿಂಗಳಲ್ಲಿ ನಡೆಯುವ ಚಳುವಳಿಯಲ್ಲಿ ನಾವು ನಮ್ಮೆಲ್ಲ ಸಾಧ್ಯತೆಗಳನ್ನು ಸಂಪೂರ್ಣವಾಗಿ ಬಳಸಿಕೊಳ್ಳಬೇಕು. ಕನ್ಯಾಕುಮಾರಿಯಿಂದ ಹಿಮಾಲಯದವರೆಗೆ, ತಿರುವನಂತಪುರದಿಂದ ಮುಂಬಯಿ, ಕಲ್ಕತ್ತಾದಿಂದ ಅಮೃತಸರ ಹಾಗೂ ಹುಸ್ಸೈನಿವಾಲಾಗಳವರೆಗೆ ವ್ಯಾಪಿಸುವ ಒಂದು ತಿಂಗಳ ಕಾಲದ ಜಾಥಾ ಕಾರ್ಯಕ್ರಮಕ್ಕಾಗಿ ನಮ್ಮ ಸಾಮೂಹಿಕ ಸಂಘಟನೆಗಳು ತಮ್ಮೆಲ್ಲ ಶಕ್ತಿಯನ್ನೂ ವ್ಯಯಿಸಿದುಡಿಯಬೇಕು. ಜಾಥಾಗಳಿಗೆ ಸ್ವಾಗತ ನೀಡಿ ಡಿಸೆಂಬರ್ 9 ರಂದು ದೆಹಲಿಯಲ್ಲಿ ನಡೆಯುವ ಪ್ರದರ್ಶನಕ್ಕೆ ಲಕ್ಷಾಂತರ ಜನ ಬರುವಂತೆ ಜನತೆಯನ್ನು ಉತ್ತೇಜಿಸಬೇಕು, ಪಾರ್ಲಿಮೆಂಟ್ ಚಲೋ ಕಾರ್ಯಕ್ರಮ ಅಭೂತಪೂರ್ವ ಯಶಸ್ಸುಗಳಿಸಬೇಕು.

○

ಸಿ. ಐ. ಟಿ. ಯು. ರಾಜ್ಯ ಮಂಡಳಿ ತೀರ್ಮಾನ

ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯುನಿಯನ್ಸ್(ಸಿ.ಐ.ಟಿ.ಯು) ಕರ್ನಾಟಕ ರಾಜ್ಯ ಮಂಡಳಿ ಸಭೆ ಕಾ. ಎಸ್.ಸೂರ್ಯನಾರಾಯಣರಾವ್‌ರವರ ಅಧ್ಯಕ್ಷತೆಯಲ್ಲಿ ನವೆಂಬರ್ 9ರಂದು ಬೆಂಗಳೂರಿನಲ್ಲಿ ಜರುಗಿತು. ಸಭೆಯಲ್ಲಿ ರಾಜ್ಯದ ಕಾರ್ಮಿಕವರ್ಗ ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಹಲವಾರು ನಿರ್ಣಯಗಳನ್ನು ಕೈಗೊಳ್ಳಲಾಯಿತು. ನಾಲ್ಕು ಎಡ ಪಕ್ಷ ಹಾಗೂ 24 ಸಾಮೂಹಿಕ ಸಂಘಟನೆಗಳು ರೂಪಿಸಿರುವ 17ಅಂಶಗಳ ಬದಲೀ ಧೋರಣೆಯ ಬೇಡಿಕೆಗಳಿಗಾಗಿ ಹಾಗೂ ರಾಜೀವ್ ಗಾಂಧಿ ರಾಜಿನಾಮೆ ಕೊಡಬೇಕು, ಮಧ್ಯಂತರ ಚುನಾವಣೆ ನಡೆಯಬೇಕೆಂದು ಒತ್ತಾಯಿಸಿ ತಿರುವನಂತಪುರದಿಂದ ಹೊರಟು ನವಂಬರ್ 20ರಂದು ಬೆಂಗಳೂರಿಗೆ ಬರುವ ಹಾಗೂ ರಾಜ್ಯದ 4 ಉಪ ಜಾಥಾಗಳಿಗೆ ರಾಜ್ಯದ ಎಲ್ಲಾ ಸಿ.ಐ.ಟಿ.ಯು. ಸಂಘಗಳು ಸ್ವಾಗತ ನೀಡಬೇಕೆಂದು ಕರೆನೀಡಿದೆ. ವ್ಯಾಪಕ ಪ್ರಚಾರ ಕೈಗೊಂಡು ಈ ಕಾರ್ಯಕ್ರಮದ ಮಹತ್ವವನ್ನು ತಿಳಿಸಿ ಡಿಸೆಂಬರ್ 9 ರ ಮಜ್ದೂರ್-ಕಿಸಾನ್ ದೆಹಲಿ ಚಲೋಗೆ ಪ್ರತಿಯೊಂದು ಸಂಘವನ್ನು ಪ್ರತಿನಿಧಿಸುವ ಸಹಸ್ರಾರು ಕಾರ್ಮಿಕರು ಪಾಲ್ಗೊಳ್ಳಲು ಕರೆ ನೀಡಿದೆ.

1985—86ರ ಅನ್ಯೂಯಲ್ ರಿಟರ್ನ್, ಅಫಿಲಿಯೇಷನ್ ಫೀ ಬಾಕಿ ಇರುವ ಎಲ್ಲಾ ಸಂಘಗಳು ಕೂಡಲೇ ನೀಡಬೇಕು. ಡಿ.1 ರಿಂದ 3ರ ವರೆವಿಗೆ ಚಂಡೀಗಢದಲ್ಲಿ ಸೇರುವ ಕೇಂದ್ರ ಕಾರ್ಯಕಾರಿ ಸಭೆಯಲ್ಲಿ ಅದನ್ನು ಮಂಡಿಸಲಾಗುವುದು. 6ನೇ ಅಖಿಲಭಾರತ ಸಮ್ಮೇಳನದ ವರದಿ ಮಾಡದಿರುವ ಕಡೆ ಕೂಡಲೇ ವರದಿ ಮಾಡಬೇಕು. ದುಡಿಯುವ ಮಹಿಳೆಯರ ಸಭೆಯ ತೀರ್ಮಾನ ಜಾರಿಗೆ ತರಬೇಕು. ಬರ ಮತ್ತು ನೆರೆಪರಿಹಾರ ಸಂಗ್ರಹಿಸಬೇಕು. ಅಸ್ಸಾಂ ಸಿ.ಐ.ಟಿ.ಯು. ಮೇಲೆ ನಡೆಯುತ್ತಿರುವ ದಾಳಿ ಪ್ರತಿಭಟಿಸಿ ತಂತಿ ನೀಡುವುದು. ಧೀರ್ಘ ಕಾಲದಿಂದ ಹೋರಾಟದಲ್ಲಿರುಸ ಗುಲ್ಬರ್ಗಾದ ಷಹಬಾದ್ ಎ.ಸಿ.ಸಿ ಬ್ಯಾಟ್ ಕಾಕ್ ಜನರಲ್ ವರ್ಕರ್ಸ್ ಯುನಿಯನ್‌ಗೆ ಸಹಾಯಧನ ಕಳುಹಿಸಬೇಕು. ಬೆಂಗಳೂರಿನ ಬೆಂಗಾಲ್ ಲ್ಯಾಂಪ್ಸ್, ಡೆಕ್ಕನ್‌ವೈರ್ಸ್ ಎಂಪ್ಲಾಯಿಸ್ ಯುನಿಯನ್ ಸಂಘನ್ನು ಸಿ.ಐ.ಟಿ.ಯು. ಪಟ್ಟಿಯಿಂದ ತೆಗೆದುಹಾಕಿದೆ. ಮುಂದಿನ ತಿಂಗಳ ಅಂತ್ಯದಲ್ಲಿ ಬೆಂಗಳೂರಿನಲ್ಲಿ ನಡೆಯಬೇಕಿದ್ದ ರಾಜ್ಯ ಸಿ.ಐ.ಟಿ.ಯು.ಸಮ್ಮೇಳನವನ್ನು ಮುಂದೂಡಲಾಗಿದ್ದು ಮುಂದಿನ ತಾರೀಖನ್ನು ತಿಳಿಸಲಾಗುವುದು. ಈ ಮೇಲ್ಕಂಡ ತೀರ್ಮಾನಗಳನ್ನು ಕಾರ್ಯಗತ ಮಾಡಲು ದುಡಿಯಬೇಕೆಂದು ರಾಜ್ಯ ಮಂಡಳಿ ಕರೆ ನೀಡಿದೆ.

○

ಉಳ್ಳಾಲ ರೈತ ಸಮಾವೇಶ

ಉಳ್ಳಾಲ ಗ್ರಾಮದ ರೈತ-ಕೃಷಿ ಕೂಲಿಗಾರರ ಸಮಾವೇಶ ಅಕ್ಟೋಬರ್ 18ರಂದು ಜನ ಶಕ್ತಿ ಕಲಾ ಸಂಘ ಕಛೇರಿಯಲ್ಲಿ ಜರುಗಿತು. ಕೋಟೆಕಾರ್ ಸರ್ಕಲ್ ರೈತ ಸಂಘ ಕಾರ್ಯದರ್ಶಿ ಕಾ.ಶ್ರೀಪಾವುಲ್ ಡಿ'ಸೋಜ ಅಧ್ಯಕ್ಷತೆ ವಹಿಸಿದ್ದರು. ಕಾ. ರಾಮಚಂದ್ರ ಉಚ್ಚಿಲ್, ವಿಶ್ವನಾಥ ಬಂಗೇರ, ಯು, ಪೂವಪ್ಪ, ಯು, ಬಾಸ್ಕರರವರುಗಳು ಮಾತನಾಡಿ ರೈತ ಸಂಘ ಬಲಪಡಿಸಲು ಕರೆ ನೀಡಿದರು. ಉಳ್ಳಾಲದ ಬಂಡಿ ಕೋಟ್ಯಾ ಬಳಿ ಎರಡು ತೋಡುಗಳಿಗೆ ಅಡ್ಡ ಕಟ್ಟೆಗಳನ್ನು ರಚಿಸಿ ರೈತರಿಗೆ ನೀರಿನ ಸೌಕರ್ಯ ಒದಗಿಸಬೇಕು, ಇಲ್ಲಿನ ಕಿರುನದಿಗೆ ಸೇತುವೆ ನಿರ್ಮಿಸಬೇಕೆಂದು ಜಿಲ್ಲಾ ಪರಿಷತ್‌ಗೆ ಒತ್ತಾಯಿಸಲು, ಉಳ್ಳಾಲದಿಂದ ನೇತ್ರಾವತಿ ನದಿವರೆಗೆ ರಸ್ತೆ ನಿರ್ಮಾಣ ಮುಂತಾದ ಸಮಸ್ಯೆಗಳ ಕುರಿತು ನಿರ್ಣಯ ಕೈಗೊಳ್ಳಲಾಯಿತು. ಕಾ. ಶ್ರೀ ಪಾವುಲ್ ಡಿ' ಸೋಜ ಅಧ್ಯಕ್ಷರಾಗಿರುವ 27 ಜನರ ಸಮಿತಿಯನ್ನು ರಚಿಸಲಾಯಿತು.

●

ಹರಿಜನರ ಭೂಮಿ ಕಬಳಿಸುವ ಕಾಂಗೈ ನಾಯಕರು

ವಿರಾಜಪೇಟೆ ತಾಲ್ಲೋಕು ಅರ್ಜಿ ಗ್ರಾಮದ ಎರವರ ರಾಜ ಮತ್ತು ಎರವರ ಮಾದ ಎಂಬ ಹರಿಜನರಿಗೆ ಸರ್ವೆ ನಂಬರ್ 333/1 ರಲ್ಲಿ ಮನೆ ನಿವೇಶನ ಮಂಜೂರು ಮಾಡಲಾಗಿದೆ. ಆದರೆ ವಾಸ್ತವವಾಗಿ ಈಜಾಗಇವರ ಸ್ವಾದೀನ ಸಿಕ್ಕಿಲ್ಲ.

ಇದೇ ಗ್ರಾಮದಲ್ಲಿ ಸುಮಾರು ಮೈಲಿಗಟ್ಟಲೇ ಸ್ವಂತ ಆಸ್ತಿ ಹೊಂದಿರುವ ಕಾಂಗ್ರೆಸ್ (ಐ) ನಾಯಕರು ಈ ನಿವೇಶನದ ಜಾಗವನ್ನು ಹೊತ್ತುವರಿ ಮಾಡಿ ಲಪಟಾಯಿಸಲು ಪ್ರಯತ್ನಿಸಿದ್ದಾರೆ. ಇಲ್ಲಿನ ಬೇಟೋಳಿ ಮಂಡಲ ಪಂಚಾಯಿತಿ ಕಾಂಗೈ ನಾಯಕನ ಜೊತೆ ಶಾಮೀಲಾಗಿದೆ. ಇನ್ನೊರ್ವ ವ್ಯಕ್ತಿಗೆ ಮಂಜೂರಾದ ಸೊತ್ತನ್ನು ಸಹ ಕಬಳಿಸಲಾಗಿದೆ. ಈ ರೀತಿ ಕೃಷಿ ಕೂಲಿಕಾರರಿಗೆ ಅದರಲ್ಲೂ ಗಿರಿಜನರಿಗೆ ಕಾಂಗೈ ನಾಯಕರು ಮಾಡುತ್ತಿರುವ ಈ ವಂಚನೆಯನ್ನು ವಿರಾಜಪೇಟೆಯ ಪಕ್ಷದ ಘಟಕ ಖಂಡಿಸಿದೆ. ಈ ಬಗ್ಗೆ ಸೂಕ್ತ ಕ್ರಮ ಜರುಗಿಸಿ ನೊಂದ ಕುಟುಂಬಗಳಿಗೆ ರಕ್ಷಣೆ ಒದಗಿಸಬೇಕೆಂದು ಒತ್ತಾಯಿಸಿದೆ.

○

Printed & Published by P. Ramachandra Rao on behalf of the Communist Party of India [Marxist] Karnataka State Committee
K. V. Temple Street, Sultanpet, Bangalore-560053 Editorial and Managerial Office : L-56, K. V. Temple Street.